# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..    ಕನ್ನಡ ವಾರಪತ್ರಿಕೆ

**ಸುಭಾಷಿತ:**

ಎಲ್ಲಿ ಯಾರ ಹೆಸರಿನ ಅನ್ನವಿರುತ್ತದೋ
ಸಮಯ ಅವರನ್ನು ಅಲ್ಲಿಗೆ ಕರೆದೊಯ್ಯುತ್ತದೆ..
ಯಾರೂ ಕೂಡ ಇನ್ನೊಬ್ಬರು ಕೊಟ್ಟಿದ್ದನ್ನು ತಿನ್ನುವುದಿಲ್ಲ
ತನ್ನ ಅದೃಷ್ಟದಲ್ಲಿ ಇದ್ದುದನ್ನೇ ತಿನ್ನುತ್ತಾರೆ..
ಪರರಿಂದ ಯಾರು ಉನ್ನತ ಸ್ಥಾನ ಪಡೆಯುವುದಿಲ್ಲ
ಅದೃಷ್ಟದ ಬಾಗಿಲು ತೆರೆದಾಗ ತಾನಾಗಿಯೇ ಒಲಿಯುತ್ತದೆ..
ಇನ್ನೊಬ್ಬರ ಸಹಕಾರದಿಂದ ಸಿಂಹಾಸನ ಏರಲಾಗುವುದಿಲ್ಲ
ಭಗವಂತನ ಅನುಗ್ರಹ ಆದಾಗ ಅವಕಾಶ ಒದಗುತ್ತದೆ..
ಎಲ್ಲವೂ ಭೂಮಿಗೆ ಬರುವಾಗಲೇ ನಿಗದಿಯಾಗಿರುತ್ತದೆ
ಆದರೆ ಎಲ್ಲರು ಮಾನವರಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ..

**ಭಗವಾನ್ ಶ್ರೀಕೃಷ್ಣ**



REGD NO: 1327299/KARKAN/2018/26532 www.karavalitharangini.com KARAVALI THARANGINI KANNADA Weekly Mangaluru ದಿನಾಂಕ: 22-08-2025 to 28-08-2025 ಬೆಲೆ: 7-00 ಸಂಪುಟ–5 ಸಂಚಿಕೆ–09 ಪುಟಗಳು–6









ನಗರ ಪ್ರದೇಶಗಳಲ್ಲಿ ಬೀದಿ ನಾಯಿಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದ್ದು, ಅದಕ್ಕೆ ಪ್ರಮುಖ ಕಾರಣ ಬೀದಿ ನಾಯಿಗಳಿಗೆ ಊಟ ಹಾಕುವವರೆ, ರಸ್ತೆಗಳಲ್ಲಿ ನಡೆದುಕೊಂಡು ಹೋಗುವಾಗ ಭಯಬಿದ್ದುಕೊಂಡು ಹೋಗಬೇಕಾಗಿದೆ ಎನ್ನುವುದು ಹಲವರ ಅಳಲು. ಇನ್ನು ಪ್ರಾಣಿ ಪ್ರಿಯರಿಗೆ ಬೀದಿನಾಯಿಗಳು ಬೀದಿಯಲ್ಲಿ ಓಡಾಡುತ್ತಿದ್ದರೆ ಅದೇನೋ ಖುಷಿ. ಅದರಿಂದ ಜನ ಸಾಮಾನ್ಯರು ಅನುಭವಿಸಬಹುದಾದ ನೋವು ಲೆಕ್ಕಕ್ಕೆ ಬರುತ್ತಿಲ್ಲ. ಬೀದಿ ನಾಯಿಗಳನ್ನು ಆಶ್ರಯ ತಾಣಗಳಿಗೆ ಸ್ಥಳಾಂತರಿಸುವಂತೆ ನಿರ್ದೇಶಿಸಿದ ಸುಪ್ರೀಂ ಕೋರ್ಟ್ ಆದೇಶವನ್ನು ಪ್ರಾಣಿ ಪ್ರಿಯರು ವಿರೋಧಿಸುತ್ತಿದ್ದಾರೆ ಎಂದರೆ ತಪ್ಪಾಗಲಾರದು.

## ರಾತ್ರಿ ಚಟುವಟಿಕೆ ಇಲ್ಲದೆ ಮಂಗಳೂರು ಸತ್ತು ಹೋದಂತಾಗಿದೆ: ಡಿ.ಕೆ.ಶಿ



**ಬೆಂಗಳೂರು:** ಮಂಗಳೂರು ದೊಡ್ಡ ನಗರವಾಗಿ ಗುರುತಿಸಿಕೊಂಡಿದ್ದರೂ ಸಂಜೆ ಏಳು ಗಂಟೆ ಬಳಿಕ ಯಾವುದೇ ವ್ಯಾಪಾರ –ವಾಹಿವಾಟು ಚಟುವಟಿಕೆಗಳು ಇಲ್ಲದೆ ಸತ್ತು ಹೋಗಿದೆ ಎಂದು ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಶಾಸನ ರಚನಾ ಕಲಾಪದಲ್ಲಿ ಸಣ್ಣ ನೀರಾವರಿ ಸಚಿವ ಎನ್.ಎಸ್.ಭೋಸರಾಜು ಅವರು ಮಂಡಿಸಿದ ಕೆರೆಗಳ ಸಂರಕ್ಷಣೆ ಹಿನ್ನೆಲೆ 2025ನೆ ಸಾಲಿನ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು **3ನೇ ಪುಟಕ್ಕೆ**

## ಸರ್ಕಾರ ಹಿಂದು ಧಾರ್ಮಿಕ ನಂಬಿಕೆಗಳನ್ನು ಘಾಸಿಗೊಳಿಸಿದೆ –ಕಾಮತ್

**ಬೆಂಗಳೂರು:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನಿನ ಹೆಸರಿನಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯ ಸಂಭ್ರಮಕ್ಕೆ ರಾಜ್ಯ ಕಾಂಗ್ರೆಸ್ ಸರ್ಕಾರ ಕೊಳ್ಳಿ ಇಟ್ಟು ಹಿಂದೂ ಧಾರ್ಮಿಕ ನಂಬಿಕೆಗಳನ್ನು ಘಾಸಿಗೊಳಿಸಿದೆ ಎಂದು ಅಧಿವೇಶನದಲ್ಲಿ ಶಾಸಕ ವೇದವ್ಯಾಸ ಕಾಮತ್ ರವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆ ಎಂದರೆ ಧಾರ್ಮಿಕ ಕ್ಷೇತ್ರಗಳಿಗೆ ಪ್ರಸಿದ್ಧಿ. ಅಂತಹ ಸ್ಥಳದಲ್ಲಿ ಹಬ್ಬದ ಸಂಭ್ರಮ ತುಸು ಹೆಚ್ಚೇ ಇರುವುದು ಸಾಮಾನ್ಯವಾಗಿದ್ದು, ಕೋಲ, ನೇಮ, ಯಕ್ಷಗಾನ, ಬ್ರಹ್ಮಕಲಶ ಹೀಗೆ ನಿರಂತರವಾಗಿ ಕಾರ್ಯಕ್ರಮಗಳು ನಡೆಯುತ್ತವೆ. ಅದರಂತೆ ಶ್ರೀ ಕೃಷ್ಣ ಜನ್ಮಾಷ್ಟಮಿಯು ಈ ಭಾಗದಲ್ಲಿ ಸಂಭ್ರಮದ ಹಬ್ಬವಾಗಿದ್ದು ಪೊಲೀಸರು ಸಂಜೆ **3ನೇ ಪುಟಕ್ಕೆ**



## ಮಹೇಶ್ ಶೆಟ್ಟಿ ತಿಮರೋಡಿ ಪೊಲೀಸ್ ವಶಕ್ಕೆ..!

**ಉಜಿರೆ:** ಸೌಜನ್ಯ ಪರ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿಯನ್ನು ಇಂದು ಬ್ರಹ್ಮಾವರ ಪೊಲೀಸರು ಉಜಿರೆಯ ತಿಮರೋಡಿಯ ಮನೆಯಲ್ಲಿ ವಶಕ್ಕೆ ಪಡೆದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 28 ಕೊಲೆಗಳನ್ನು ಮಾಡಿದ್ದಾರೆಂದು ಸೌಜನ್ಯ ಪರ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಗಂಭೀರ ಆರೋಪ ಮಾಡಿದ್ದು, ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಗೃಹ ಸಚಿವ ಡಾ. ಜಿ ಪರಮೇಶ್ವರ್ ಹೇಳಿದ್ದರು. ಆದರೆ ಎರಡು ವರ್ಷಗಳ ಹಿಂದೆ ಮಾಡಿದ ಆರೋಪ ಇದಾಗಿದ್ದು, **3ನೇ ಪುಟಕ್ಕೆ**








# ಸಂಪಾದಕೀಯ

ಕರಾವಳಿ ತರಂಗಿಣಿ

## ಬಿದ್ದವ ಮತ್ತೆ ಏಳಲಾರನು ಎನ್ನುವ ಭ್ರಮೆ ಬೇಡ

– ಲಲಿತಶ್ರೀ ಪ್ರೀತಮ್ ರೈ



ಮನುಷ್ಯನಿಗೆ ಅಸಾಯಕತೆ ಎನ್ನುವುದು ಜೀವನದ ಒಂದಲ್ಲ ಒಂದು ಹಂತದಲ್ಲಿ ಕಾಡುತ್ತದೆ. ಅಂತಹ ಪ್ರಮೇಯ ಹೆಣ್ಣು ಅಥವಾ ಗಂಡು ಎಂಬ ಬೇದ ಭಾವ ಇಲ್ಲದೆ ಕಾಡುತ್ತದೆ. ಆದರೆ ಕೆಲವು ಸಂದರ್ಭದಲ್ಲಿ ಹೆಣ್ಣನ್ನು ಅದು ಸ್ವಲ್ಪ ಹೆಚ್ಚಾಗಿಯೇ ಕಾಡುತ್ತದೆ ಎಂದರೆ ತಪ್ಪಾಗಲಾರದು. ಕೆಲವರು ಅದೇ ಅಸಹಾಯಕತೆಯನ್ನೇ ಬಳಸಿಕೊಂಡು ಮುಂದೆ ಹೋಗುವುದನ್ನು ಕೂಡ ಕಾಣಬಹುದು. ಆದರೆ ಅಂತಹ ದಾರಿ ಹೆಚ್ಚು ದಿನ ಸಾಗಲು ಸಾಧ್ಯವಿಲ್ಲ. ಇನ್ನು ಕೆಲವರು ಬೇರೆಯವರ ಅಸಹಾಯಕತೆಯನ್ನು ಬಳಸಿಕೊಂಡು ಮುಂದೆ ಸಾಗುವುದನ್ನು ಕೂಡ ನಾವು ಕಂಡಿದ್ದೇವೆ. ಆದರೆ ಅದು ಕೂಡ ಹೆಚ್ಚು ದಿನ ಉಳಿಯಲು ಸಾಧ್ಯವಿಲ್ಲ. ಇನ್ನೊಬ್ಬರ ಅಸಹಾಯಕತೆ ಆ ಸಮಯಕ್ಕೆ ಅಸ್ತ್ರ ಆಗಬಹುದು. ಆದರೆ ಅವರು ಒಮ್ಮೆ ಎದ್ದು ನಿಂತರೆ ನಾವೇ ಅಸಹಾಯಕತೆಗೆ ದೂಡಲ್ಪಡುತ್ತೇವೆ. ಹಾಗಾಗಿ ಇಂತಹ ಕೆಲಸ ಮಾಡುವಾಗ ಪ್ರತಿ ಕ್ಷಣವೂ ಯೋಚಿಸಬೇಕಾಗುತ್ತದೆ. ಮನುಷ್ಯನಾಗಿ ಹುಟ್ಟಿದ ಮೇಲೆ ಹೃದಯವಂತಿಕೆ ಇರಬೇಕು. ತಾನು ಹೃದಯವಂತನಂತೆ ನಟಿಸಿ ಚಪ್ಪಾಳೆ ಗಿಟ್ಟಿಸಿಕೊಳ್ಳುವುದು ರಂಗದಲ್ಲಿ ಮಾತ್ರ ಸಾಧ್ಯ. ಜೀವನದಲ್ಲಿ ಹಾಗೇ ಮಾಡುತ್ತಾ ಹೋದರೆ ಒಂದಲ್ಲ ಒಂದು ದಿನ ಮುಖ ಕವಚ ಕಳಚಿ ಬೀಳುತ್ತದೆ. ಒಬ್ಬೊಬ್ಬನಿಗೆ ಒಂದೊಂದು ದೌರ್ಬಲ್ಯಗಳು ಇರುವುದನ್ನು ನಾವು ಕಾಣಬಹುದು. ಉದಾಹರಣೆಗೆ ಕೆಲವರಿಗೆ ಒಬ್ಬರು ತಮ್ಮ ಮುಂದೆ ಬಂತು ಅತ್ತರೆ ಅದನ್ನು ಸಹಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಎಷ್ಟೋ ಸಲ ಅಂತವರು ಅಳುವವರ ಜೊತೆಗೂಡಿ ಕಣ್ಣೀರು ಹಾಕುವುದನ್ನು ನೋಡುತ್ತೇವೆ. ಅಂದ ಮಾತ್ರಕ್ಕೆ ಅವನು ಹುಚ್ಚ ಎಂದು ಭಾವಿಸಬೇಕಾಗಿಲ್ಲ. ಅದು ಅವನ ಹೃದಯವಂತಿಕೆಯನ್ನು ಅಥವಾ ಅವನ ಮನದಲ್ಲಿ ಅಡಕವಾಗಿರುವ ಸಹಾನುಭೂತಿಯನ್ನು ತೋರಿಸುತ್ತದೆ. ಅಂತಹ ಸಹಾನುಭೂತಿ ಎಲ್ಲರಿಗೂ ಬರಲು ಸಾಧ್ಯವಿಲ್ಲ. ನಿಜವಾಗಿಯೂ ಅಂತಹ ಸಹಾನುಭೂತಿ ನಿಮ್ಮಲ್ಲಿದ್ದರೆ ನೀವು ಪುಣ್ಯವಂತರು. ಆದರೆ ಆ ಸಹಾನುಭೂತಿ ಕೆಲವು ಸಲ ನಮಗೆ ಮುಳುವಾಗುವುದುಂಟು. ಆದರೆ ಒಂದಲ್ಲ ಒಂದು ದಿನ ಅದರಿಂದ ಒಳ್ಳೆಯದೇ ಆಗುತ್ತದೆ. ಯಾವಾಗಲೂ ಇನ್ನೊಬ್ಬರಿಗೆ ಕೆಡುಕು ಮಾಡದೇ ಬದುಕುವುದು ಬಲು ಶ್ರೇಷ್ಟವಾದ ತತ್ವಗಳಲ್ಲಿ ಒಂದು. ಎಷ್ಟೋ ಸಲ ನಮಗೆ ಗೊತ್ತಿಲ್ಲದೆ ಆದ ತಪ್ಪುಗಳಿಗೆ ನಾವು ಕೊರಗುತ್ತೇವೆ. ಅಂದರೆ ನಾವು ಮಾಡಿದ ತಪ್ಪು ಎಂದೋ ನಮ್ಮನ್ನು ಕಾಡುವುದುಂಟು. ಅದಕ್ಕೆ ಕಾರಣ ನಿಮ್ಮೊಳಗಿನ ಅಂತರಾತ್ಮ. ಎಷ್ಟೋ ಸಲ ಹೃದಯವಂತರ ಅಂತರಾತ್ಮ ಅವರನ್ನು ಎಚ್ಚರಿಸುತ್ತದೆ. ಆದರೆ ಹೃದಯವೇ ಇಲ್ಲದವರಿಗೆ ಇದು ಅನ್ವಯಿಸುವುದಿಲ್ಲ. ಹಾಗಾಗಿ ಅವರಿಗೆ ತಾನು ಮಾಡಿದ ತಪ್ಪು ಗೋಚರಿಸುವುದಾಗಲಿ ಅಥವಾ ಅದಕ್ಕೆ ಪ್ರಶ್ಚಾತಾಪವಾಗಲಿ ಅವರಲ್ಲಿ ಕಾಣುವುದಿಲ್ಲ. ಕೆಲವು ಸಲ ಜೀವನದಲ್ಲಿ ಬೇಸತ್ತಾಗ ಅನ್ನಿಸುತ್ತದೆ ಅದೇ ಸರಿಯಾದ ತತ್ವ ಎಂದು. ಅಂತವರಿಗೆ ಅಳುಕು ಅಂಜಿಕೆ ಯಾವುದು ಕಾಡುವುದಕ್ಕೆ ಸಾಧ್ಯವೇ ಇರುವುದಿಲ್ಲ. ಹಾಗಾಗಿ ಅಂತವರ ಮುಖದಲ್ಲಿ ತಪ್ಪಿತಸ್ತ ಭಾವನೆ ಕಾಣುವುದೇ ಇಲ್ಲ. ಅದೇ ಸಹಾನುಭೂತಿ ಇರುವ ಮನುಷ್ಯನಾದರೆ ತನ್ನಿಂದಾದ ಸಣ್ಣ ತಪ್ಪಿಗೂ ತಲೆ ತಗ್ಗಿಸುತ್ತಾನೆ. ಅಷಾಡಭೂತಿಗಳಿಗೆ ಆ ಭಯವೇ ಇಲ್ಲ. ಎಂತಹ ಪರಿಸ್ಥಿತಿಯಲ್ಲೂ ತಾನೆ ಉತ್ತಮನಂತೆ ವರ್ತಿಸುತ್ತಾನೆ. ಆದರೆ ಆ ದೇವರ ತಕ್ಕಡಿಯಲ್ಲಿ ಎಲ್ಲರೂ ಒಂದೇ. ಅದಕ್ಕೆ ಜಾತಿ ನೀತಿಗಳ ಹಂಗಿಲ್ಲ. ಬಡವ ಬಲ್ಲಿದನೆಂಬ ಬೇದ ಭಾವವಿಲ್ಲ. ಹಾಗಾಗಿ ಒಂದಲ್ಲ ಒಂದು ದಿನ ದೇವರ ಮುಂದೆ ತಲೆ ಬಾಗಲೇ ಬೇಕಾಗುತ್ತದೆ ಎಂದು ನಮ್ಮ ಅಮ್ಮ ಆಗಾಗ ಹೇಳುತ್ತಿದ್ದರು. ಇದೆಲ್ಲಾ ತಿಳಿದಿದ್ದರು ಮನುಷ್ಯ ಯಾಕೆ ಸ್ವಾರ್ಥಿ ಆಗುತ್ತಾನೆ. ನೀನು ಬರುವಾಗ ತಂದಿದ್ದೇನು, ಹೋಗುವಾಗ ತೆಗೆದುಕೊಂಡು ಹೋಗುವುದೇನು?. ಕೋಟಿಗಳ ಸಾಮ್ರಾಜ್ಯ ಕಟ್ಟಿ ಮೆರೆದವರ ಕತೆಗಳು ನಮ್ಮ ಮುಂದೆ ಸಾಲು ಸಾಲಾಗಿ ಕಾಣುತ್ತದೆ. ರಾಜಾ ಮಹಾರಾಜರುಗಳೇ ಮಣ್ಣಲ್ಲಿ ಮಣ್ಣಾಗಿ ಹೋಗಿರುವಾಗ ಇನ್ನು ಹುಲು ಮಾನವರಾದ ನಾವು ಎಲ್ಲಿಯ ಲೆಕ್ಕ. ಹೆತ್ತ ತಾಯಿಗೆ ಹತ್ತು ಮಕ್ಕಳಿದ್ದರೂ ಅವಳಿಗೆ ಎಲ್ಲಾ ಮಕ್ಕಳು ಸಮಾನರು. ಅವಳು ಯಾವ ಮಕ್ಕಳಿಗೂ ತಾರತಮ್ಯ ಮಾಡಲಾರಳು. ಹಾಗೆಯೇ ಹುಟ್ಟಿಸಿದ ದೇವರು ಅವರವರ ಕರ್ಮಕ್ಕೆ ಸರಿಯಾಗಿ ಫಲವನ್ನು ಕೊಡುತ್ತಾನೆ. ಇವತ್ತು ಖುಷಿಯಾಗಿ ನಕ್ಕು ನಲಿದಾಡುವವರಿಗೆ ನಾಳೆ ಅಳುವ ಪ್ರಮೇಯ ಬರಲಾರದು ಎಂದು ತಿಳಿಯುವವನು ಮೂರ್ಖ. ಭೂಮಿ ಸುತ್ತುತ್ತಲೇ ಇರುತ್ತದೆ. ಹಾಗೇಯೇ ನಮ್ಮ ಜೀವನ ಚಕ್ರ ಇವತ್ತು ಕೆಳಗಿರುವವನು ನಾಳೆ ತುತ್ತತುದಿಯಲ್ಲಿ ಇರಬಹುದು. ಇವತ್ತು ಬಿದ್ದನೆಂದರೆ ನಾಳೆ ಏಳಲಾರನು ಎನ್ನುವ ಭ್ರಮೆಯನ್ನು ಬಿಟ್ಟು ಬದುಕುವುದು ಉತ್ತಮವಾದದ್ದು. ಯಾರನ್ನು ಯಾರು ಬೇಕಾದರೂ ಮೋಸ ಮಾಡಬಹುದು. ಆದರೆ ಇದು ಒಂದು ದಿನ ದೇವರು ಮಾಡಬಹುದಾದ ಮೋಸಕ್ಕೆ ನಾವೇ ದಾರಿ ಮಾಡಿಕೊಟ್ಟಂತಾಗುತ್ತದೆ. ಅದನ್ನು ಅರಿತುಕೊಂಡು, ನಾವು ಸಹಾನಾಭೂತಿ ಇಟ್ಟುಕೊಂಡು ಯಾರಿಗೂ ಕೆಡುಕನ್ನು ಮಾಡದೇ ನಮ್ಮ ಮುಂದಿನ ಪೀಳಿಗೆ ದಾರಿದೀಪವಾಗೋಣ...

# ಸಂಪ್ರದಾಯ

## ಬತುಕಮ್ಮ




ತೆಲಂಗಾಣದಲ್ಲಿ ಆಚರಿಸಲ್ಪಡುವ ಬತುಕಮ್ಮ ಒಂದು ರೋಮಾಂಚಕ, ವರ್ಣರಂಜಿತ ಹೂವಿನ ಹಬ್ಬವಾಗಿದ್ದು, ಮಹಿಳೆಯರು ಬಹಳ ಉತ್ಸಾಹದಿಂದ ಆಚರಿಸುತ್ತಾರೆ. ಈ ಹಬ್ಬವು ರಾಜ್ಯದಲ್ಲಿ ಅಪಾರ ಪ್ರಾಮುಖ್ಯತೆ ಮತ್ತು ಪ್ರಾಮುಖ್ಯತೆಯನ್ನು ಹೊಂದಿದೆ ಮತ್ತು ವರ್ಷಗಳಲ್ಲಿ ಅದರ ಸಾಂಸ್ಕೃತಿಕ ಗುರುತಿನೊಂದಿಗೆ ಅಳಿಸಲಾಗದ ಸಂಬಂಧವನ್ನು ಹೊಂದಿದೆ. ಬತುಕಮ್ಮ ಅಂದರೆ 'ಮಾತೃ ದೇವತೆ ಜೀವಂತವಾಗಿ ಬರುತ್ತಾಳೆ', ಮಹಿಳಾಲ ಕೆನೊಂದಿಗೆ ಆಚರಿಸಲಾಗುತ್ತದೆ. ಪ್ರಕೃತಿಯ ನೀಡುವ ಸಮೃದ್ಧಿಯನ್ನು ಇದು ಸಾರುತ್ತದೆ. ಹಬ್ಬವು ಮಹಾಲಯ ಅಮಾವಾಸ್ಯೆಯ ದಿನದಂದು ಪ್ರಾರಂಭವಾಗುತ್ತದೆ ಮತ್ತು ಒಂಬತ್ತು ದಿನಗಳ ಕಾಲ ಬಹಳ ಸಡಗರದಿಂದ ಆಚರಿಸಲಾಗುತ್ತದೆ. ಪೇಥ ಅಥವಾ ಸದ್ದುಲ ಬತುಕಮ್ಮ ಎಂದು ಕರೆಯಲ್ಪಡುವ ಬತುಕಮ್ಮನ ಅಂತಿಮ ದಿನವು ದಸರಾಕ್ಕೆ ಎರಡು ದಿನಗಳ ಮೊದಲು ಬರುತ್ತದೆ. ಮಹಿಳೆಯರು, ಹಬ್ಬದ ಸಮಯದಲ್ಲಿ ಸಣ್ಣ 'ಬತುಕಮ್ಮ'ಗಳನ್ನು ಮಾಡಿ ನಂತರ ನೀರಿನಲ್ಲಿ ಮುಳುಗಿಸುತ್ತಾರೆ. ಹಬ್ಬದ ಮೊದಲ ಐದು ದಿನಗಳಲ್ಲಿ, ಮಹಿಳೆಯರು ಸಾಮಾನ್ಯವಾಗಿ ತಮ್ಮ ಅಂಗಳವನ್ನು ಹಸುವಿನ ಸಗಣಿ ಬೆರೆಸಿದ ನೀರಿನಿಂದ ಸ್ವಚ್ಛಗೊಳಿಸಿ, ಅದರ ಮೇಲೆ ರಂಗೋಲಿ ಬಿಡಿಸಲು ಅಕ್ಕಿ ಹಿಟ್ಟನ್ನು ಬಳಸುತ್ತಾರೆ. ನಂತರ ಅವರು ಹಸುವಿನ ಸಗಣಿಯಿಂದ ಬತುಕಮ್ಮವನ್ನು ತಯಾರಿಸುತ್ತಾರೆ. ಅಂಗಳದಲ್ಲಿ ಸಣ್ಣ ಶಂಕುವಿನಾಕಾರದ ಉಂಡೆಗಳನ್ನು ಇಡುತ್ತಾರೆ. ಹಬ್ಬದ ಕೊನೆಯ ದಿನದಂದು, ಮನೆಯ ಪುರುಷರು ಹೊರಗೆ ಹೋಗಿ 'ಗುಣುಕ', 'ತಂಗಡು', 'ಚಾಮಂತಿ' ಮುಂತಾದ ಹೂವುಗಳನ್ನು ಸಂಗ್ರಹಿಸಿ ನಂತರ ಮನೆಯವರೆಲ್ಲರೂ ಅವುಗಳನ್ನು ರಾಶಿಯಲ್ಲಿ ಜೋಡಿಸುತ್ತಾರೆ. ತಾಂಬಲನ್ ಎಂದು ಕರೆಯಲ್ಪಡುವ ಹಿತ್ತಾಳೆಯ ತಟ್ಟೆಯಲ್ಲಿ, ವಿವಿಧ ಬಣ್ಣಗಳ ಹೂವುಗಳನ್ನು ವೃತ್ತಾಕಾರದ ಸಾಲುಗಳಲ್ಲಿ ಎಚ್ಚರಿಕೆಯಿಂದ ಜೋಡಿಸಲಾಗುತ್ತದೆ, ಒಂದರ ಮೇಲೊಂದು ಪದರ. ಬತುಕಮ್ಮ ಕ್ರಮೇಣ ಗಾತ್ರದಲ್ಲಿ ಹೆಚ್ಚಾಗುತ್ತದೆ ಮತ್ತು ಹೆಚ್ಚು ರೋಮಾಂಚಕ ಮತ್ತು ವರ್ಣಮಯವಾಗಿ ಕಾಣುತ್ತದೆ.

# ವೈದ್ಯೋನಾರಾಯಣೋ ಹರಿಃ

## ಅಡುಗೆ ಸೋಡ




ಸಾಮಾನ್ಯವಾಗಿ ಅಡುಗೆ ಮನೆಯಲ್ಲಿ ಕಾಣಸಿಗುವ ಪದಾರ್ಥಗಳಲ್ಲಿ ಅಡುಗೆ ಸೋಡವು ಒಂದು. ಅಡುಗೆ ಸೋಡಾ ನೈಸರ್ಗಿಕವಾಗಿ ಲಭಿಸುವ ಲವಣವಾಗಿದ್ದು ನಿತ್ಯದ ಹಲವು ಕಾರ್ಯಗಳಲ್ಲಿ ಮತ್ತು ಅಡುಗೆಗಳಲ್ಲಿ ಬಳಸಲ್ಪಡುತ್ತದೆ. ಈ ಸುಲಭ ಸಾಮಾಗ್ರಿ ಕ್ಯಾನ್ಸರ್ ನಂತಹ ಭಯಂಕರ ರೋಗಕ್ಕೆ ಸುಲಭ ಮದ್ದಾಗಬಲ್ಲುದು. ಕೆಲವು ಔಷಧಗಳು ಪ್ರಬಲವಾಗಿದ್ದು ಅಲ್ಪ ಪ್ರಮಾಣದಲ್ಲಿ ಸೇವಿಸಿದರೂ ಕೆಲವು ಸಲ ಇದರ ಅಡ್ಡ ಪರಿಣಾಮ ಬೀರಬಲ್ಲದು. ಹಲ್ಲುಗಳನ್ನು ಹೊಳೆಯುವಂತೆ ಮಾಡಲು ನೀವು ಅಡುಗೆ ಸೋಡಾ ಅನ್ನು ಪೇಸ್ಟ್ ರೀತಿಯಲ್ಲಿ ಬಳಸಬಹುದು. ಅಡುಗೆ ಸೋಡಾ ಉರಿಯೂತದ ಮತ್ತು ಬ್ಯಾಕ್ಟೀರಿಯಾ ವಿರೋಧಿ ಗುಣಗಳನ್ನು ಹೊಂದಿದ್ದು, ಇದು ದದ್ದುಗಳು, ತುರಿಕೆ ಮತ್ತು ಉರಿಯೂತವನ್ನು ನಿವಾರಿಸುತ್ತದೆ. ಅಡುಗೆ ಸೋಡಾ ಆಂಟಿ-ಬ್ಯಾಕ್ಟೀರಿಯಲ್ ಮತ್ತು ಆಂಟಿ-ಫಂಗಲ್ ಗುಣಗಳನ್ನು ಹೊಂದಿದ್ದು, ಮೂಗಿನ ಮೇಲಿರುವ ಕಪ್ಪು ಕಲೆಗಳ ಸಮಸ್ಯೆಯನ್ನು ತೆಗೆದುಹಾಕಲು ಇದು ಅತ್ಯಂತ ಪರಿಣಾಮಕಾರಿ ಎಂದು ಪರಿಗಣಿಸಲಾಗಿದೆ. ಅಡಿಗೆ ಸೋಡಾ ಸಂಧಿವಾತ, ಆರ್ಥ್ರೈಟಿಸ್, ಜಾಯಿಂಟ್ ಸಮಸ್ಯೆಗಳಿಗೆ ಉತ್ತಮ ಪರಿಹಾರವಾಗಬಲ್ಲದು. ಮುಖದ ಮೇಲೆ ಮೂಡುವ ಮೊಡವೆಗಳನ್ನು ಹೋಗಲಾಡಿಸಲು ಅಡಿಗೆ ಸೋಡಾವನ್ನು ಬಳಸಬಹುದು. ಅಷ್ಟೇ ಅಲ್ಲದೆ, ಅಡುಗೆ ಸೋಡ ಪಿಎಚ್ ಲೆವೆಲ್ ಅನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಬಟ್ಟೆಗಳ ಮೇಲಿನ ಕಲೆ ತೆಗೆಯಲು ಅಡುಗೆ ಸೋಡಾ ಸಹಕಾರಿ.

ಅಡುಗೆ ಸೋಡಾದ ಅತಿಯಾದ ಬಳಕೆ ಹೃದಯದ ಆರೋಗ್ಯಕ್ಕೆ ಹಾನಿಕರ. ಅಡುಗೆ ಸೋಡಾ ಆಮ್ಲದೊಂದಿಗೆ ಬೆರೆತಾಗ, ರಾಸಾಯನಿಕ ಪ್ರಕ್ರಿಯೆ ನಡೆಯುತ್ತದೆ. ಇದನ್ನು ಅತಿಯಾಗಿ ಬಳಸುವುದರಿಂದ ಹೊಟ್ಟೆಯಲ್ಲಿ ಅತಿಯಾದ ಗ್ಯಾಸ್ ಉಂಟಾಗಬಹುದು.

# ಕ್ಷೇತ್ರದರ್ಶನ




ಕಲ್ಲು ಗಣಪತಿ

ಉಡುಪಿ ಜಿಲ್ಲೆಯ ಪಡುಮುಂಡು ಶಿರಿಯಾರ ಗ್ರಾಮದಲ್ಲಿರುವ ಕಲ್ಲು ಗಣಪತಿ ದೇವಸ್ಥಾನವು ಬೆಟ್ಟಗಳಲ್ಲಿದೆ. ಪ್ರಕೃತಿಯ ಮಡಿಲಲ್ಲಿರುವ ಈ ದೇವಾಲಯದ ಸೊಬಗೇ ಮನೋಹರವಾಗಿದೆ. ಸರೋವರದ ಬಲಭಾಗವನ್ನು ಸೂರ್ಯ–ಪುಷ್ಕರಿಣಿ ಎಂದು ಕರೆಯಲಾಗುತ್ತದೆ ಮತ್ತು ಸರೋವರದ ಎಡಭಾಗವನ್ನು ಚಂದ್ರ–ಪುಷ್ಕರಿಣಿ ಎಂದು ಕರೆಯಲಾಗುತ್ತದೆ. ಇಲ್ಲಿ ಲಕ್ಷ್ಮೀನಾರಾಯಣ, ಚನ್ನಕೇಶವ ಮತ್ತು ಸೂರ್ಯನಾರಾಯಣನ ಗುಡಿಗಳಿವೆ. ಕಲ್ಲು ಗಣಪತಿ ದೇವಸ್ಥಾನವು ಶ್ರೀಯಾರ ಗ್ರಾಮದ ಅತ್ಯಂತ ಹಳೆಯ ದೇವಾಲಯಗಳಲ್ಲಿ ಒಂದಾಗಿದ್ದು, ಈ ದೇವಾಲಯವು ಶಿವ, ಪಾರ್ವತಿ ಮತ್ತು ಗಣೇಶನ ಮೂರು ಪ್ರತಿಮೆಗಳನ್ನು ಒಳಗೊಂಡಿದೆ. ದೇವಾಲಯವು ಕಲ್ಲಿನ ಗುಹೆಯೊಳಗೆ ಇದ್ದು, ಇಡೀ ದೇವಾಲಯವು ಹಸಿರು ಗಿಡಮೂಲಿಕೆಗಳು, ಪೊದೆಗಳು ಮತ್ತು ಹುಲ್ಲುಗಳಿಂದ ಆವೃತವಾಗಿದೆ. ಪ್ರಮುಖ ಗರ್ಭಗುಡಿಯು ನಿಂತಿರುವ ಭಂಗಿಯಲ್ಲಿರುವ ಗಣಪತಿಯ ಆಕೃತಿಯ ಸಮೀಪದಲ್ಲಿದೆ. ಗಣಪತಿ ಪ್ರತಿಮೆ ನಾಲ್ಕು ಕೈಗಳನ್ನು ಹೊಂದಿದ್ದು, ಎರಡು ತೋಳುಗಳು 'ವರದ ಹಸ್ತ'ವು ಪ್ರಾಪಂಚಿಕ ವಸ್ತುಗಳತ್ತ ಒಲವನ್ನು ಸೂಚಿಸುತ್ತದೆ ಮತ್ತು ಇತರ ಎರಡು ಕೈಗಳು ಮೋಕ್ಷವನ್ನು ಸೂಚಿಸುತ್ತದೆ. ಗಣಪತಿ ದೇವರಿಗೆ ತುಲಾಭಾರ ಆಚರಣೆಯ ರೂಪದಲ್ಲಿ ಪ್ರಾರ್ಥನೆ ಸಲ್ಲಿಸಲಾಗುತ್ತದೆ. ಭಕ್ತರು ತಮ್ಮನ್ನು ತೂಕದ ತಕ್ಕಡಿಯಲ್ಲಿ ತೂಗುತ್ತಾರೆ ಮತ್ತು ದೇವರ ಹೆಸರಿನಲ್ಲಿ ತಮ್ಮ ಸಮಾನ ತೂಕವನ್ನು ಚಿನ್ನ, ಹಣ್ಣುಗಳು ಅಥವಾ ಇತರ ದುಬಾರಿ ಧಾನ್ಯಗಳ ರೂಪದಲ್ಲಿ ಅರ್ಪಿಸುತ್ತಾರೆ. ಭಾರ್ಗವ ಪುರಾಣದಿಂದ ಹಲವಾರು ಶಿಲ್ಪ ಚಿತ್ರಣಳು ಇಲ್ಲಿವೆ. ಗಣೇಶನ ಆಶೀರ್ವಾದ ಪಡೆಯಲು ದೂರದ ಊರುಗಳಿಂದ ಅನೇಕ ಜನರು ಇಲ್ಲಿಗೆ ಬರುತ್ತಾರೆ. ಗಣೇಶ ಚತುರ್ಥಿ ಹಬ್ಬವನ್ನು ಅತ್ಯಂತ ವೈಭವದಿಂದ ಆಚರಿಸಲಾಗುತ್ತದೆ. ದೇವಸ್ಥಾನಕ್ಕೆ ಭೇಟಿ ನೀಡುವ ಎಲ್ಲಾ ಭಕ್ತರಿಗೆ ಊಟವನ್ನು ನೀಡಲಾಗುತ್ತದೆ. ಪ್ರಸಾದವು ಹಾಲು, ಸಕ್ಕರೆ, ಬೇಳೆ ಮತ್ತು ಜೇನುತುಪ್ಪವನ್ನು ಒಳಗೊಂಡಿರುತ್ತದೆ. ದೂರದ ಊರಿನಿಂದ ಬರುವ ಭಕ್ತರಿಗೆ ಅನ್ನಸಂತರ್ಪಣೆ, ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. ಇಲ್ಲಿ ವಿಶೇಷ ಪೂಜೆಯನ್ನು ದಿನಕ್ಕೆ ಮೂರು ಬಾರಿ ನಡೆಸಲಾಗುತ್ತದೆ. ಮುಂಜಾನೆ 5 ಗಂಟೆಗೆ, ಮಧ್ಯಾಹ್ನ 1 ಗಂಟೆಗೆ ಮತ್ತು ರಾತ್ರಿ 8.30 ಗಂಟೆಗೆ. ಈ ದೇವಾಲಯವು ಬೆಳಿಗ್ಗೆ 6 ರಿಂದ 9 ರವರೆಗೆ ತೆರೆದಿರುತ್ತದೆ. ವಿಶೇಷವಾಗಿ ಭಾನುವಾರ, ಮಂಗಳವಾರ ಮತ್ತು ಶುಕ್ರವಾರದಂದು ಭಕ್ತರು ಹರಿದು ಬರುತ್ತಾರೆ. ಚೌತಿ, ಸಂಕ್ರಮಣ ಮತ್ತು ಸಂಕಷ್ಟಹರ ಚತುರ್ಥಿಯ ಪ್ರಸಿದ್ಧ ಹಬ್ಬಗಳ ಸಂದರ್ಭದಲ್ಲಿ ನೀವು ಸಾಕಷ್ಟು ಜನಸಂದಣಿಯನ್ನು ಕಾಣಬಹುದು. ರಥೋತ್ಸವದ ವಾರ್ಷಿಕ ಉತ್ಸವವು ಒಂದು ದೊಡ್ಡ ಆಕರ್ಷಣೆಯಾಗಿದೆ. ಗಣೇಶನಿಗೆ ಕಬ್ಬು, ತೆಂಗಿನಕಾಯಿ, ಹಣ್ಣು, ಮೋದಕ, ಕಡುಬನ್ನು ಅರ್ಪಿಸುತ್ತಾರೆ. ಉಡುಪಿಗೆ ಬೇಟಿ ನೀಡುವ ಸಂದರ್ಭದಲ್ಲಿ ಒಮ್ಮೆ ಇಲ್ಲಿಗೆ ಬೇಟಿ ನೀಡಿ ಪುನೀತರಾಗಲು ಮರೆಯದಿರಿ.

# ಕಾಮಧೇನು

## ಪ್ರಕೃತಿಯೇ ನಮಗೆ ದಾರಿ ದೀಪ

@ ಕೃಷ್ಣಾಮೃತ




ಚಿತ್ರಾಂಗುಡಿ ಕಣ್ಮೋಳಿ ಎಂದು ಕರೆಯಲ್ಪಡುವ ತಮಿಳಿನಾಡಿನ ಮುದುಕುಳತ್ತೂರು ತಾಲೂಕು, ರಾಮನಾಥಪುರಂ ಜಿಲ್ಲೆಯಲ್ಲಿರುವ ಚಿತ್ರಾಗುಂಡಿ ಅಭಯಾರಣ್ಯವು 1989ರಲ್ಲಿ ಸಂರಕ್ಷಿತ ಪ್ರದೇಶವಾಗಿ ಘೋಷಿಸಲ್ಪಟ್ಟಿದ್ದು, ತಮಿಳುನಾಡಿನ ರಾಮನಾಥಪುರಂ ಜಿಲ್ಲೆಗೆ ಸೇರಿದ ಪ್ರಸಿದ್ಧ ಯಾತ್ರಾ ಕೇಂದ್ರವಾದ ರಾಮೇಶ್ವರಂ ಬಳಿ ಅದ್ಭುತವಾದ ಪಕ್ಷಿಧಾಮವಿದೆ. ಇದು ಕಂಜಿರಂಕುಲಂ ಪಕ್ಷಿಧಾಮದ ಪಕ್ಕದಲ್ಲಿದೆ. ಬಾಬುಲ್ ಮರಗಳ ಪ್ರಮುಖ ಬೆಳವಣಿಗೆಯಲ್ಲಿ ನೆಲೆಸಿರುವ ಹಲವಾರು ವಲಸೆ ಹೆರಾನ್ ಜಾತಿಗಳಿಗೆ ಗೂಡುಕಟ್ಟುವ ತಾಣವಾಗಿ ಗಮನಾರ್ಹವಾಗಿದೆ. ಅಂತಾರಾಷ್ಟ್ರೀಯ ತಮಿಳುನಾಡಿನ ರಾಮನಾಥಪುರಂನಲ್ಲಿರುವ ಈ ಅರ್ಧಚಂದ್ರಾಕೃತಿಯ ಅಭಯಾರಣ್ಯವು ಚಳಿಗಾಲದಲ್ಲಿ ವಲಸೆ ಹಕ್ಕಿಗಳನ್ನು ತುಂಬಾ ಆಕರ್ಷಿಸುತ್ತದೆ. ವಾಸ್ತವವಾಗಿ, ಇದು ನೈಸರ್ಗಿಕ ಆವಾಸಸ್ಥಾನಗಳಲ್ಲಿ ಒಂದಾಗಿದೆ ಮತ್ತು ಚಳಿಗಾಲದ ವಲಸೆ ಹಕ್ಕಿಗಳಿಗೆ ಆದ್ಯತೆಯ ತಾಣವಾಗಿದೆ. ಅಭಯಾರಣ್ಯ ಪ್ರದೇಶವು ಸಮುದಾಯ 49 ಅಡಿ ಎತ್ತರದ ಒಡ್ಡುಗಳಲ್ಲಿದೆ. ಒಡ್ಡಿನ ಒಟ್ಟು ಉದ್ದ 2.492 ಮೈಲಿಯಿದ್ದು, ಅರ್ಧಚಂದ್ರಾಕಾರದ ಕಾನ್ಮೋಯಿ ಉತ್ತರದ ಬಿಂದುವಿನಲ್ಲಿ ಪ್ರಾರಂಭವಾಗುತ್ತದೆ ಅಲ್ಲಿ ಗುಂಡಾರ್ ನದಿಯಿಂದ ಜಲಚರವು ಕಣ್ಮೊಯ್ಗೆ ಹರಿಯುತ್ತದೆ. ಚಿತ್ರಾಂಗುಡಿ ಪಕ್ಷಿಧಾಮದಲ್ಲಿ ಬೂದು ಬಕ, ಬಣ್ಣದ ಕೊಕ್ಕರೆಗಳು, ಬೂದು ಪೆಲಿಕಾನ್‌ಗಳು, ಕಪ್ಪು ಐಬಿಸ್ ಮತ್ತುಬಿಳಿ ಐಬಿಸ್‌ನಿಂದ ತೆರೆದ ಕೊಕ್ಕರೆಗಳು, ಬೂದು ಪೆಲಿಕಾನ್‌ಗಳು, ಡಬ್‌ಚಿಕ್, ಜಾನುವಾರು ಬೆಳ್ಳಕ್ಕಿ, ಭಾರತೀಯ ಡಾರ್ಟರ್‌ಗಳು, ಕೊಳದ ಬೆಳ್ಳಕ್ಕಿಗಳು ಮತ್ತು ಸಣ್ಣ ಬೆಳ್ಳಕ್ಕಿಗಳವರೆಗೆ, ನೀವು ಅನೇಕ ಜಾತಿಗಳನ್ನು ಗುರುತಿಸಲು ಮತ್ತು ಗುರುತಿಸಲು ಆಹ್ಲಾದಕರ ಸಮಯವನ್ನು ಹೊಂದಿರುತ್ತೀರಿ. ಅಭಯಾರಣ್ಯದಲ್ಲಿ ವಾಸಿಸುವ ಅಥವಾ ಭೇಟಿ ನೀಡುವ ವರ್ಣರಂಜಿತ ರೆಕ್ಕೆಯ ಜೀವಿಗಳು. ಅಕ್ಟೋಬರ್ ಮತ್ತು ಫೆಬ್ರವರಿ ನಡುವೆ ಆಕರ್ಷಕವಾದ ರೆಕ್ಕೆಯ ಪ್ರವಾಸಿಗರು ದೂರದ ದೇಶಗಳಿಂದ ಅಭಯಾರಣ್ಯಕ್ಕೆ ಸೇರುತ್ತಾರೆ. ಪಕ್ಷಿಗಳು ಹಗಲಿನಲ್ಲಿ ಮರಗಳಲ್ಲಿ ವಿಶ್ರಾಂತಿ ಪಡೆಯುತ್ತವೆ ಮತ್ತು ರಾತ್ರಿಯಲ್ಲಿ ಇಲಿಗಳು, ಮೊಟ್ಟೆಗಳು ಮತ್ತು ಇತರ ಪಕ್ಷಿಗಳ ಮರಿಗಳನ್ನು ತಿನ್ನುತ್ತವೆ. ಈ ಪಕ್ಷಿಗಳು ಪರಿಸರ ವ್ಯವಸ್ಥೆಯ ಆರೋಗ್ಯದ ಗಮನಾರ್ಹ ಸೂಚಕವಾಗಿದೆ ಮತ್ತು ಅವುಗಳನ್ನು ನಗರ ಪಕ್ಷಿಗಳು ಎಂದು ಕರೆಯಲಾಗುತ್ತದೆ. ಚಿತ್ರಾಂಗುಡಿ ಪಕ್ಷಿಧಾಮವು ಸಸ್ಯ ಸಂಕುಲದಿಂದ ಸಮೃದ್ಧವಾಗಿದ್ದು, ಬಾಬುಲ್ ಮರಗಳ ಸಾಕಷ್ಟು ಪ್ರಮುಖವಾದ ಪ್ರಸರಣವು ಅದರ ವಿಶಿಷ್ಟ ಲಕ್ಷಣಗಳಲ್ಲಿ ಒಂದಾಗಿದೆ. ಅದರ ಪ್ರಕಾಶಮಾನವಾದ ಗೋಲ್ಡನ್–ಹಳದಿ ವರ್ಣದ ಹೂವುಗಳೊಂದಿಗೆ, ಇದು ಅಭಯಾರಣ್ಯದ ವಿಶಿಷ್ಟ ಲಕ್ಷಣವಾಗಿದೆ. ಚಿತ್ರಾಂಗುಡಿ ಭೂದೃಶ್ಯವು ಹುಲ್ಲುಗಾವಲು ಪ್ರದೇಶಗಳೊಂದಿಗೆ ಪ್ರಧಾನವಾಗಿ ಒಣ ಪತನಶೀಲ ಅರಣ್ಯವಾಗಿದೆ. ಜೌಗು ಪ್ರದೇಶವು ಅದರ ಆಳದ ದೃಷ್ಟಿಯಿಂದ ಅನಿಯಮಿತವಾಗಿದೆ ಮತ್ತು ಮಳೆಗಾಲದಲ್ಲಿ ಸಾಮಾನ್ಯವಾಗಿ ಅಂಚಿನವರೆಗೆ ತುಂಬಿರುತ್ತದೆ. ಇಲ್ಲಿನ ಸಸ್ಯವರ್ಗವು ಹೆಚ್ಚಾಗಿ ಉಷ್ಣವಲಯದ ಒಣ ಪತನಶೀಲ ಅರಣ್ಯವಾಗಿದೆ. ಇದರ ಹೊರತಾಗಿ ಪ್ರೊಸೊಪಿಸ್ ಜೂಲಿಫ್ಲೋರಾ, ಬರ್ಮುಡಾ ಹುಲ್ಲು ಮತ್ತು ಡಿಚಾಂಥಿಯಂ ಪೊವೊಲಾಟಮ್‌ನಂತಹ ಇತರ ಮರಗಳಿವೆ. ಮೊದಲ ಬಾಬುಲ್ ತೋಟವನ್ನು 1979ರಲ್ಲಿ ಫಾರ್ಮ್ ಅರಣ್ಯ ವಿಭಾಗವು ಮಾಡಿತು. ಹುಣಸೆ ಮರಗಳು, ರೇಷ್ಮೆ ಮರಗಳು, ಅಂಜೂರದ ಮರಗಳು, ಪೋರ್ಟಿಯಾ ಮರಗಳು, ಬೇವಿನ ಮರಗಳು, ತಾಳೆ ಮರಗಳು ಮತ್ತು ಡ್ರಮ್ಸ್ಟಿಕ್ ಮರಗಳನ್ನು ನೀರಾವರಿ ಟ್ಯಾಂಕ್ ಬಂಡ್ ಮತ್ತು ತೊಟ್ಟಿಯ ಹೊರಗಿನ ಪ್ರದೇಶದಲ್ಲಿ ಕಾಣಬಹುದು. ಆಕ್ರಮಣಕಾರಿ ಪ್ರೊಸೊಪಿಸ್ ಅಭಯಾರಣ್ಯದ ಹೆಚ್ಚಿನ ಭಾಗವನ್ನು ನಿಧಾನವಾಗಿ ಅತಿಕ್ರಮಿಸುತ್ತಿದೆ, ಬಾಬುಲ್‌ಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಹುಲ್ಲುಗಳಿಂದ ಪ್ರಾಬಲ್ಯ ಹೊಂದಿದೆ. ಪ್ರಸ್ತುತ ಅಭಯಾರಣ್ಯದಲ್ಲಿ ಸಸ್ಯವರ್ಗವಿಲ್ಲದ ಯಾವುದೇ ಪ್ರದೇಶವಿಲ್ಲ, ಪ್ರತಿ ಮೂಲೆ ಮತ್ತು ಮೂಲೆಯನ್ನು ಪ್ರೊಸೊಪಿಸ್ ಆಕ್ರಮಿಸಿಕೊಂಡಿದೆ. ಕ್ಯಾಸ್ಸುಟಾ ಕ್ರೀಪರ್‌ಗಳು ಅಭಯಾರಣ್ಯದಲ್ಲಿ ವ್ಯಾಪಕವಾಗಿ ಬೆಳೆಯುತ್ತಿವೆ ಮತ್ತು ಅನೇಕ ಬಾರಿ ಪ್ರೊಸೊಪಿಸ್‌ನ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ಇದರ ಜೊತೆಗೆ ಒಸಿಮಮ್ ಸ್ಯಾಂಕಮ್, ಗ್ಲೋರಿಯೋಸಾ ಸುಪರ್ಬಾ ಮುಂತಾದ ಔಷಧೀಯ ಸಸ್ಯಗಳು ಸಹ ಪ್ರದೇಶದಲ್ಲಿ ಕಂಡುಬರುತ್ತವೆ. ಈ ಅಭಯಾರಣ್ಯಕ್ಕೆ ಪ್ರವಾಸಿಗರು ಹೆಚ್ಚಾಗಿ ಅಕ್ಟೋಬರ್‌ನಿಂದ ಫೆಬ್ರವರಿ ತಿಂಗಳ ಅವಧಿಯಲ್ಲಿ ಭೇಟಿ ನೀಡುತ್ತಾರೆ. ಅಭಯಾರಣ್ಯಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ಮುದುಕುಳತ್ತೂರಿನ ಪಿಡಬ್ಲ್ಯುಡಿ ರೆಸ್ಟ್ ಹೌಸ್, ಸಾಯಲ್ಗುಡಿಯಲ್ಲಿರುವ ಫಾರೆಸ್ಟ್ ರೆಸ್ಟ್ ಹೌಸ್ ಮತ್ತು ಪರಮಕುಡಿಯಲ್ಲಿ ವಸತಿ ಸಿಗುತ್ತದೆ. ಚಿತ್ರಾಂಗುಡಿ ಪಕ್ಷಿಧಾಮವು ಎಲ್ಲಾ ಸಾರಿಗೆ ವಿಧಾನಗಳೊಂದಿಗೆ ಉತ್ತಮ ಸಂಪರ್ಕ ಹೊಂದಿದೆ. ಇದು ಮಧುರೈನಿಂದ 120 ಕಿಮೀ, ರಾಮನಾಥಪುರದಿಂದ 45 ಕಿಮೀ ಮತ್ತು ಸಾಯಕುಡಿ ಪಟ್ಟಣದಿಂದ 12 ಕಿಮೀ ದೂರದಲ್ಲಿದೆ. 45 ಕಿಮೀ ದೂರದಲ್ಲಿರುವ ರಾಮನಾಥಪುರದಲ್ಲಿ ಹತ್ತಿರದ ರೈಲು ನಿಲ್ದಾಣವಿದೆ. ಚಿತ್ರಾಂಗುಡಿ ಭಾರತದ ಅಪೂರ್ವವಾದ ಹುಲ್ಲುಗಾವಲಾಗಿದೆ.

# ಕಲ್ಪವೃಕ್ಷ

@ಪ್ರೀತಂ ರೈ ಇ

## ಮೇಜರ್ ತರ್ಸೇಮ್ ಲಾಲ್ ಶರ್ಮಾ

1971 ರ ಭಾರತ–ಪಾಕ್ ಯುದ್ಧದ ಸಮಯದಲ್ಲಿ, ಮೇಜರ್ ತರ್ಸೇಮ್ ಲಾಲ್ ಶರ್ಮಾ ಅವರ 18 ನೇ ಘಟಕ ರಜಪೂತ್ ಅನ್ನು ಪೂರ್ವ ವಲಯದಲ್ಲಿ ನಿಯೋಜಿಸಲಾಗಿತ್ತು. ಅಖೌರಾ ಮೇಲಿನ ದಾಳಿಗೆ ಕಂದಕಗಳು, ಜೌಗು ಪ್ರದೇಶಗಳು ಮತ್ತು ಸೊಂಟದ ಆಳದ ನೀರು ಸೇರಿದಂತೆ ಕಷ್ಟಕರವಾದ ಭೂಪ್ರದೇಶವನ್ನು ದಾಟುವ ಅಗತ್ಯವಿತ್ತು, ನಂತರ ಶತ್ರುಗಳ ಸುಸಜ್ಜಿತ ರಕ್ಷಣೆಯ ಮೇಲೆ ದಾಳಿ ನಡೆಸಲಾಯಿತು. ಈ ರಕ್ಷಣೆಗಳು ಪಟ್ಟಣದ ನಿರ್ಮಿತ ಪ್ರದೇಶಗಳಲ್ಲಿ ಮತ್ತು ಪಶ್ಚಿಮಕ್ಕೆ ಟೈಟಾಸ್ ನದಿಯ ಉದ್ದಕ್ಕೂ ಕಾರ್ಯತಂತ್ರವಾಗಿ ಇರಿಸಲ್ಪಟ್ಟವು. ಮೇಜರ್ ತರ್ಸೇಮ್ ಲಾಲ್ ಶರ್ಮಾ ಅವರ 18 ರಜಪೂತ್ ಸೇರಿದಂತೆ ರಜಪೂತ ಬೆಟಾಲಿಯನ್‌ಗಳು ಅಸಾಧಾರಣ ಸ್ಥಿತಿಸ್ಥಾಪಕತ್ವವನ್ನು ಪ್ರದರ್ಶಿಸಿ, ನಿರಂತರ ಬೆದರಿಕೆಯಲ್ಲಿ ವಿಶ್ವಾಸಘಾತುಕ ಭೂಪ್ರದೇಶದ ಮೂಲಕ ಮುನ್ನಡೆಯುತ್ತಿದ್ದವು. ಸವಾಲುಗಳ ಹೊರತಾಗಿಯೂ, ಅವರು ಡಿಸೆಂಬರ್ 05, 1971 ರಂದು ಶತ್ರು ಸ್ಥಾನಗಳನ್ನು ಯಶಸ್ವಿ ಯಾಗಿ ವಶಪಡಿಸಿಕೊಂಡರು, ಯುದ್ಧತಂತ್ರದ ಅದ್ಭುತ ಯೋಜನೆಯನ್ನು ಬಳಸಿದರು, ಇದು ಶತ್ರುಗಳನ್ನು ಗೊಂದಲಕ್ಕೀಡು ಮಾಡಿ, ದುರ್ಬಲಗೊಳಿಸಿತು. ಅಗರ್ತಲಾ ವಾಯುನೆಲೆ ಮತ್ತು ಸಿಲ್ಹೆಟ್–ಚಿತ್ತಗಾಂಗ್–ಢಾಕಾ ರೈಲ್ವೆ ಲಿಂಕ್ ಬಳಿಯ ಕಾರ್ಯತಂತ್ರದ ಮಹತ್ವದ ಉದ್ದೇಶವಾದ ಅಖೌರಾ ಕದನದ ಸಮಯದಲ್ಲಿ, ಮೇಜರ್ ತರ್ಸೇಮ್ ಲಾಲ್ ಶರ್ಮಾ ಪ್ರಮುಖ ಪಾತ್ರ ವಹಿಸಿದರು. ನಂತರ, ಡಿಸೆಂಬರ್ 09, 1971 ರಂದು, ನಿರ್ಣಾಯಕ ಶತ್ರು ಸ್ಥಾನವನ್ನು ವಶಪಡಿಸಿಕೊಳ್ಳುವ ಕಾರ್ಯವನ್ನು ವಹಿಸಿಕೊಂಡ ಅವರು, ದಿಟ್ಟ ದಾಳಿ




ಯೋಜನೆಯನ್ನು ರೂಪಿಸಿದರು ಮತ್ತು ಕಾರ್ಯಗತಗೊಳಿಸಿದರು. ಮೇಜರ್ ಶರ್ಮಾ ಅವರ ನಿರಂತರ ಮುನ್ನಡೆಯು ಶತ್ರು ಪಡೆಗಳಲ್ಲಿ ಭೀತಿಯನ್ನು ಉಂಟುಮಾಡಿತು. ಈ ಕ್ರಮವು ಅಜಾಗರೂಕತೆಯಿಂದ ಬೆಟಾಲಿಯನ್–ಪ್ಲಸ್ ಬಲವನ್ನು ಮತ್ತು ಪದಾತಿದಳದ ಮುಖ್ಯ ಪ್ರಧಾನ ಕಚೇರಿಯನ್ನು ನದಿಯ ಭಾರತೀಯ ಬದಿಯಲ್ಲಿ ಸಿಲುಕಿಸಿತು, ಇದು ಭಾರತೀಯ ಪಡೆಗಳಿಗೆ ಗಮನಾರ್ಹ ಯುದ್ಧತಂತ್ರದ ಪ್ರಯೋಜನವನ್ನು ಸೃಷ್ಟಿಸಿತು. ಶತ್ರುಗಳು ಹೆಚ್ಚಿನ ಸಂಖ್ಯೆಯಲ್ಲಿ ಸೈನಿಕರು ಇದ್ದರೂ, ಮೇಜರ್ ಶರ್ಮಾ ಮತ್ತು ಅವರ ಪಡೆಗಳು ತಮ್ಮ ಸ್ಥಾನವನ್ನು ದೃಢವಾಗಿ ಹಿಡಿದಿದ್ದವು. ಹತಾಶೆಯಿಂದ ಶತ್ರುಗಳು ಎರಡು ಟ್ಯಾಂಕ್‌ಗಳ ಬೆಂಬಲದೊಂದಿಗೆ ಪ್ರತಿದಾಳಿ ನಡೆಸಿದರು. ಯಾವುದೇ ಪ್ರತಿಕೂಲ ಪರಿಸ್ಥಿತಿಯಿಂದ ವಿಚಲಿತರಾಗದ ಮೇಜರ್ ಶರ್ಮಾ ತಮ್ಮ ನೆಲೆಯಲ್ಲಿ ನಿಂತು ಅಪ್ರತಿಮ ಧೈರ್ಯದಿಂದ ತಮ್ಮ ಸೈನ್ಯವನ್ನು ಮುನ್ನಡೆಸುವುದನ್ನು ಮುಂದುವರೆಸಿದರು. ತೀವ್ರವಾದ ಗುಂಡಿನ ಚಕಮಕಿಯ ಸಮಯದಲ್ಲಿ, ಅವರು ಮೆಷಿನ್–ಗನ್ ಗುಂಡಿನ ದಾಳಿಗೆ ತುತ್ತಾಗಿ ಗಾಯಗೊಂಡು ಸಾವನ್ನಪ್ಪಿದರು. ಈ ಕಾರ್ಯಾಚರಣೆಯಲ್ಲಿ, ಮೇಜರ್ ತಾರ್ಸೇಮ್ ಲಾಲ್ ಶರ್ಮಾ ಅಸಾಧಾರಣ ಶೌರ್ಯ, ಅಸಾಧಾರಣ ನಾಯಕತ್ವ ಮತ್ತು ಕರ್ತವ್ಯ ಬದ್ಧತೆಯನ್ನು ಪ್ರದರ್ಶಿಸಿದರು. ಅವರ ಅಪ್ರತಿಮ ಧೈರ್ಯ, ಅಸಾಧಾರಣ ದೃಢನಿಶ್ಚಯ, ಅನುಕರಣೀಯ ನಾಯಕತ್ವ ಮತ್ತು ಸರ್ವೋಚ್ಚ ತ್ಯಾಗಕ್ಕಾಗಿ, ಮೇಜರ್ ತಾರ್ಸೇಮ್ ಲಾಲ್ ಶರ್ಮಾ ಅವರಿಗೆ ಮರಣೋತ್ತರವಾಗಿ "ವೀರ ಚಕ್ರ" ನೀಡಲಾಯಿತು. ಮೇಜರ್ ತರ್ಸೆಮ್ ಲಾಲ್ ಶರ್ಮಾ ಪಂಜಾಬ್‌ನ ಅಮೃತಸರದವರು. ಅವರು ರಜಪೂತ್ ರೆಜಿಮೆಂಟ್‌ನ 18 ರಜಪೂತ್ ಬೆಟಾಲಿಯನ್‌ನ ಧೀರ ಅಧಿಕಾರಿಯಾಗಿದ್ದರು. ಇವರನ್ನು ಕರಾವಳಿ ತರಂಗಿಣಿ ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತದೆ.

# ಪಾರಿಜಾತ

ಕರಾವಳಿ ತರಂಗಿಣಿ

ಒಂದು ಮನೆಯಲ್ಲಿ ಹುಟ್ಟಿ ಇನ್ನೊಂದು ಮನೆ ಬೆಳಗುವ ಹೆಣ್ಣು ತನ್ನ ಜೀವನದ ಹಾದಿಯಲ್ಲಿ ಸಾದನೆಗಳನ್ನು ಮಾಡಿ ಮುಂದಿನ ಹಲವಾರು ಹೆಣ್ಣು ಮಕ್ಕಳಿಗೆ ಮಾದರಿಯಾಗಿದ್ದಾಳೆ. ಅಂತಹ ಹೆಣ್ಣು ಮಕ್ಕಳಲ್ಲಿ ಕರಾವಳಿ ತರಂಗಿಣಿಯ ಇಂದಿನ ಅತಿಥಿ ವಿಂಬಲ್ಡನ್ ಚಾಂಪಿಯನ್‌ಶಿಪ್‌ನಲ್ಲಿ ಪಂದ್ಯವನ್ನು ಗೆದ್ದ ಮೊದಲ ಭಾರತೀಯ ಮಹಿಳಾ ಟೆನಿಸ್ ಆಟಗಾರ್ತಿ ಮತ್ತು ಲೇಖಕಿ ಲೀಲಾ ರೋ ದಯಾಳ್. ಇವರು ಇಂಗ್ಲಿಷ್ ಮತ್ತು ಸಂಸ್ಕೃತ ಎರಡರಲ್ಲೂ ಭಾರತೀಯ ಶಾಸ್ತ್ರೀಯ ನೃತ್ಯದ ಬಗ್ಗೆ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. 1934ರ ವಿಂಬಲ್ಡನ್ ಚಾಂಪಿಯನ್‌ಶಿಪ್‌ನಲ್ಲಿ ಅವರು ಸಿಂಗಲ್ಸ್ ಈವೆಂಟ್‌ನ ಮೊದಲ ಸುತ್ತಿನಲ್ಲಿ ಗ್ಲಾಡಿಸ್ ಸೌತ್‌ವೆಲ್ ಅವರನ್ನು ಸೋಲಿಸುವ ಮೂಲಕ ಪಂದ್ಯವನ್ನು ಗೆದ್ದ ಮೊದಲ ಭಾರತೀಯ ಮಹಿಳಾ ಆಟಗಾರ್ತಿಯಾದರು. ಎರಡನೇ ಸುತ್ತಿನಲ್ಲಿ ಅವರು ಮೂರು ಸೆಟ್‌ಗಳಲ್ಲಿ ಇಡಾ ಆಡಮಾಫ್ ಅವರನ್ನು ಸೋಲಿಸಿದರು. ಮುಂದಿನ ವರ್ಷ, 1935ರಲ್ಲಿ ಮೊದಲ ಸುತ್ತಿನಲ್ಲಿ ನೇರ ಸೆಟ್‌ಗಳಲ್ಲಿ ಎವೆಲಿನ್ ಡಿಯರ್‌ಮನ್‌ಗೆ ಸೋತರು. ಅವರು ಫ್ರೆಂಚ್ ಚಾಂಪಿಯನ್‌ಶಿಪ್‌ನ ಸಿಂಗಲ್ಸ್ ಸ್ಪರ್ಧೆಯನ್ನು ಐದು ಬಾರಿ ಪ್ರವೇಶಿಸಿದರು. ಆದರೆ ಪಂದ್ಯವನ್ನು ಗೆಲ್ಲಲು ಸಾಧ್ಯವಾಗಲಿಲ್ಲ. 1935ರಲ್ಲಿ ಆಕೆಯ ಎರಡನೇ ಸುತ್ತಿನ ಫಲಿತಾಂಶವು ಮೊದಲ ಸುತ್ತಿನಲ್ಲಿ ಬೈ ಕಾರಣವಾಗಿತ್ತು. ರೋ ಅವರು ಅಖಿಲ ಭಾರತ ಚಾಂಪಿಯನ್‌ಶಿಪ್‌ಗಳಲ್ಲಿ ಏಳು ಸಿಂಗಲ್ಸ್ ಪ್ರಶಸ್ತಿಗಳನ್ನು ಗೆದ್ದರು ಮತ್ತು ಮೂರು ಸಂದರ್ಭಗಳಲ್ಲಿ ರನ್ನರ್ ಅಪ್




ಆಗಿದ್ದರು. 1931 ರಲ್ಲಿ ಅವರು ವೆಸ್ಟ್ ಆಫ್ ಇಂಡಿಯಾ ಚಾಂಪಿಯನ್‌ಶಿಪ್‌ನಲ್ಲಿ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದರು ಮತ್ತು ಜೂನಿಯರ್ ಲಾನ್ ಟೆನಿಸ್ ಚಾಂಪಿಯನ್‌ಶಿಪ್‌ಗಳನ್ನು ಗೆದ್ದರು. 1937ರಲ್ಲಿ ಅವರು ಲಾಹೋರ್‌ನಲ್ಲಿ ಮೆಹರ್ ದುಬಾಶ್ ವಿರುದ್ಧ ಉತ್ತರ ಭಾರತ ಚಾಂಪಿಯನ್‌ಶಿಪ್‌ಗಳನ್ನು ಗೆದ್ದರು. ಪ್ರಾಚೀನ ಮತ್ತು ಆಧುನಿಕ ಶಾಸ್ತ್ರೀಯ ಭಾರತೀಯ ನೃತ್ಯದ ಕುರಿತು ಹಲವಾರು ಪುಸ್ತಕಗಳ ಲೇಖಕಿ ಈ ಪುಸ್ತಕಗಳು ದ್ವಿಭಾಷಾ, ಇಂಗ್ಲಿಷ್ ಮತ್ತು ಸಂಸ್ಕೃತದಲ್ಲಿ ಬರೆಯಲ್ಪಟ್ಟವು. 1958ರಲ್ಲಿ ಅವರು "ನಾಟ್ಯ ಚಂದ್ರಿಕಾ" ವನ್ನು ಪ್ರಕಟಿಸಿದರು, ಇದು ಭಾರತೀಯ ಶಾಸ್ತ್ರೀಯ ನೃತ್ಯ ರೂಪವಾದ ನತ್ಯದ ಮೇಲೆ ಕೈಬರಹದ ದ್ವಿಭಾಷಾ ಗ್ರಂಥವಾಗಿದೆ. ಅವರು ತಮ್ಮ ತಾಯಿ ಬರೆದ ಅನೇಕ ಕವಿತೆಗಳನ್ನು ಅನುವಾದಿಸಲು ಸಹಾಯ ಮಾಡಿದರು ಮತ್ತು ಅವುಗಳನ್ನು ಸಂಸ್ಕೃತ ನಾಟಕಗಳಾಗಿ ಪರಿವರ್ತಿಸಿದರು. ವೈದ್ಯ ರಾಘವೇಂದ್ರ ರೋ ಮತ್ತು ಸಂಸ್ಕೃತ ಕವಿ ಪಂಡಿತ ಕ್ಷಮಾ ರೋ ಅವರ ಪುತ್ರಿ. ಆಕೆಯ ತಾಯಿ ಕೂಡ ಆರಂಭಿಕ ಟೆನಿಸ್ ಆಟಗಾರ್ತಿಯಾಗಿದ್ದರು. 1943 ರಲ್ಲಿ ಲೀಲಾ ಹರೀಶ್ವರ್ ದಯಾಳ್ ಅವರನ್ನು ವಿವಾಹವಾದರು. ಅವರು ಯುನೈಟೆಡ್ ಸ್ಟೇಟ್ಸ್ ಮತ್ತು ನೇಪಾಳಕ್ಕೆ ಭಾರತೀಯ ರಾಯಭಾರಿಯಾಗಿದ್ದರು. ಅವರು ಮೇ 1964 ರಲ್ಲಿ ಮೌಂಟ್ ಎವರೆಸ್ಟ್‌ನ ಖುಂಬು ಪ್ರದೇಶಕ್ಕೆ ಪ್ರವಾಸದಲ್ಲಿದ್ದಾಗ ನಿಧನರಾದರು. ನಂತರ ಲೀಲಾ ಭಾರತದ ಉತ್ತರಾಖಂಡದ ರಾಣಿಖೇತ್‌ನಲ್ಲಿ ನೆಲೆಸಿದರು. ಮಹಾನ್ ವನಿತೆಗೆ ಕರಾವಳಿ ತರಂಗಿಣಿ ನಮಿಸುತ್ತಿದೆ.

# ಸರ್ಕಾರ ಹಿಂದೂಧಾರ್ಮಿಕ ನಂಬಿಕೆಗಳನ್ನು ಘಾಸಿಗೊಳಿಸಿದೆ – ಕಾಮತ್

ಒಂದನೇ ಪುಟದಿಂದ......

ಆರುಗಂಟೆಗೆ ಬಂದು ಸೌಂಡ್ ಬಾಕ್ಸ್‌ಗಳನ್ನು ತೆಗೆದುಕೊಂಡು ಹೋಗಿದ್ದರಿಂದ ಕೃಷ್ಣವೇಷ ಸ್ಪರ್ಧೆ, ಭರತನಾಟ್ಯ, ರಸಮಂಜರಿ ಸೇರಿದಂತೆ ಸಾಂಸ್ಕೃತಿಕ ಚಟುವಟಿಕೆಗಳು ಸ್ಥಗಿತಗೊಂಡು ಹಬ್ಬದ ಸಂಭ್ರಮದಲ್ಲಿದ್ದವರಿಗೆ ಇದೇ ಮೊದಲ ಬಾರಿಗೆ ನಿರಾಸೆಯಾಗಿದೆ. ಅಲ್ಲದೇ ಕಾರ್ಯಕ್ರಮ ಆಯೋಜಕರ ಮೇಲೆ, ಸೌಂಡ್ ಸಿಸ್ಟಮ್ ಮಾಲಕರ ಮೇಲೆ ಪ್ರಕರಣ ದಾಖಲಿಸಿರುವುದು ಖಂಡನೀಯ ಎಂದರು. ಹಿಂದಿನ ಬಿಜೆಪಿ ಸರ್ಕಾರದ ಸಂದರ್ಭದಲ್ಲೂ ಇಂತಹ ನಿಯಮ ಆದೇಶಗಳಿದ್ದರೂ ಹಬ್ಬದ ಸಂಭ್ರಮಕ್ಕೆ ಕಿಂಚಿತ್ತೂ ಅಡ್ಡಿಪಡಿಸಿಲ್ಲ. ರಾತ್ರಿ ಹತ್ತೂವರೆ ನಂತರ ಯಾವುದೇ ಕಾರ್ಯಕ್ರಮ ನಡೆಯಬಾರದು, ಮೊಸರು ಕುಡಿಕೆಗೆ ಕಟ್ಟಿರುವ ಮಡಿಕೆಗಳನ್ನು ನಾಳೆ ಬಂದು ಒಡೆಯಿರಿ ಎಂದು ಪೊಲೀಸರು ಹೇಳುವುದು ಎಷ್ಟು ಸರಿ? ಇನ್ನು ಕೆಲವೇ ದಿನಗಳಲ್ಲಿ ಗಣೇಶಚೌತಿ, ನವರಾತ್ರಿ, ಹುಲಿವೇಷ, ಹೀಗೆ ಇಡೀ ದಕ್ಷಿಣಕನ್ನಡ ಜಿಲ್ಲೆ ಹಬ್ಬದ ಸಂಭ್ರಮದಲ್ಲಿ ಮುಳುಗಲಿದ್ದು ಯಾವುದೇ ಗೊಂದಲ ಉಂಟಾಗದಂತೆ ರಾಜ್ಯ ಕಾಂಗ್ರೆಸ್ ಸರ್ಕಾರ ಎಚ್ಚರ ವಹಿಸಬೇಕು. ಇಲ್ಲದಿದ್ದರೆ ಜನ ರೊಚ್ಚಿಗೆದ್ದರೆ ಸರ್ಕಾರವೇ ಹೊಣೆ ಹೊರಬೇಕಾಗುತ್ತದೆ ಎಂದು ಎಚ್ಚರಿಸಿದರು.

# ಮಹೇಶ್ ಶೆಟ್ಟಿ ತಿಮರೋಡಿ ಪೊಲೀಸ್ ವಶಕ್ಕೆ..!

ಒಂದನೇ ಪುಟದಿಂದ......

ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದಿಲ್ಲ ಎಂದು ನಂತರ ಗ್ರಹಸಚಿವರು ನಂತರ ಸ್ಪಷ್ಟನೆ ಕೊಟ್ಟಿದ್ದರು. ಸಿ ಎಂ ಸಿದ್ದರಾಮಯ್ಯ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಇನ್ನೊಂದೆಡೆ ಬಿ ಎಲ್ ಸಂತೋಷ್ ಬಗ್ಗೆ ಕೆಟ್ಟದಾಗಿ ಮಾತನಾಡಿರುವ ಹಿನ್ನಲೆ ಬ್ರಹ್ಮಾವರ ಪೊಲೀಸ್ ಸ್ಟೇಷನ್‌ನಲ್ಲಿ ಮೂರು ಪ್ರಕರಣದಾಖಲಾಗಿತ್ತು. ವಿಚಾರಣೆಗೆ ಬರುವಂತೆ ಪೊಲೀಸರು ನೋಟೀಸ್ ಕೊಟ್ಟಿದ್ದರೂ ಕೂಡ ಮಹೇಶ್ ಶೆಟ್ಟಿತಿಮರೋಡಿ ವಿಚಾರಣೆಗೆ ಹಾಜರಾಗಿರಲಿಲ್ಲ. ಆ ಹಿನ್ನಲೆ ತಿಮರೋಡಿಯನ್ನು ವಶಕ್ಕೆ ಪಡೆಯಲು ಬ್ರಹ್ಮಾವರ ಪೊಲೀಸರು ತಿಮರೋಡಿ ಮನೆಗೆ ಬಂದಿದ್ದಾರೆ. ಆದರೆ ಮನೆಯೊಳಗಿರುವ ತಿಮರೋಡಿ ಬಹಳ ಸಮಯ ಹೊರಬಂದಿಲ್ಲ. ಈ ನಡುವೆ ತಿಮರೋಡಿ ಬೆಂಬಲಿಗರು ಘೋಷಣೆ ಕೂಗಲು ಪ್ರಾರಂಬಿಸಿದ್ದು, ಗಿರೀಶ್ ಮಟ್ಟಣ್ಣ ಮತ್ತು ತಂಡ ಪೊಲೀಸರಜೊತೆ ವಾಗ್ವಾದ ನಡೆಸಿದ್ದಾರೆ. ನಾವೇ ತಿಮರೋಡಿಯನ್ನು ಬ್ರಹ್ಮಾವರ ಸ್ಟೇಷನ್‌ಗೆ ಕರೆದುಕೊಂಡು ಬರುತ್ತೇವೆ ಹೊರತು ನಿಮ್ಮೊಂದಿಗೆ ಕಳುಹಿಸುವುದಿಲ್ಲ ಎಂದು ಹಠ ಹಿಡಿದಿದ್ದರು. ಪೊಲೀಸರು ತಿಮರೋಡಿಯನ್ನು ವಶಕ್ಕೆ ಪಡೆದು, ಬ್ರಹ್ಮಾವರಕ್ಕೆ ಕರೆದುಕೊಂಡು ಹೋಗಿದ್ದು, ನ್ಯಾಯಾಲಯದಲ್ಲಿ 14 ನ್ಯಾಯಾಂಗ ಬಂಧನ ವಿಧಿಸಿದ್ದಾರೆ.

# ರಾತ್ರಿಚಟುವಟಿಕೆಯಿಲ್ಲದೆ ಮಂಗಳೂರು ಸತ್ತು ಹೋದಂತಾಗಿದೆ : ಡಿ.ಕೆ.ಶಿ

ಒಂದನೇ ಪುಟದಿಂದ......

ಅಭಿವೃದ್ಧಿ ಪ್ರಾಧಿಕಾರ ವಿಧೇಯಕದ ಚರ್ಚೆಯಲ್ಲಿ ಉಪಮುಖ್ಯಮಂತ್ರಿ ಮಾತನಾಡಿ, ಮಂಗಳೂರಿನಲ್ಲಿ ಅತಿ ಹೆಚ್ಚು ವೈದ್ಯಕೀಯ, ಇಂಜಿನಿಯರಿಂಗ್ ಕಾಲೇಜುಗಳಿವೆ. ಆದರೆ ಒಂದೇ ಒಂದು ಪಂಚತಾರ ಹೋಟೆಲ್‌ಗಳಿಲ್ಲ. ಏರ್‌ಪೋರ್ಟ್ ಇದ್ದರು ಅಲ್ಲಿ ಹೋಟೆಲ್ ನಿರ್ಮಾಣಕ್ಕೆ ಬಂಡವಾಳ ಹೂಡಲು ಹೆದರುತ್ತಿದ್ದಾರೆ. ಅಲ್ಲದೆ, ನಾನು ಗ್ರಾನೈಟ್ ವ್ಯವಹಾರ ಮಾಡುತ್ತಿದ್ದ ವೇಳೆ ಮಂಗಳೂರಿಗೆ ಕಲ್ಲು ಸರಬರಾಜು ಮಾಡುತ್ತಿದ್ದೆ. ಆಗ ತುಂಬಾ ನಗರ ಚಟುವಟಿಕೆಯಿಂದ ಕೂಡಿತ್ತು. ಆದರೆ ಈಗ ಸಂಪೂರ್ಣ ಸತ್ತು ಹೋಗಿದೆ, ಚಟುವಟಿಕೆಗಳೆ ಇಲ್ಲ ಎಂದು ತಿಳಿಸಿದರು. ನಾವೆಲ್ಲರೂ ಕಳಕಳಿಯಿಂದ ಕೆಲಸ ಮಾಡುತ್ತಿದ್ದೇವೆ. ಕರಾವಳಿಯ ಜನರ ಬಗ್ಗೆ ನಮಗೆ ಕಾಳಜಿಯಿದೆ ಏಕೆಂದರೆಕೆರೆ ಬಫರ್ ವಲಯದ ಕಾರಣಕ್ಕೆ ಅವರ ಬದುಕಿಗೆ ಕಷ್ಟವಾಗುತ್ತದೆ. ಮನೆಗಳನ್ನು ಕಟ್ಟಿಕೊಳ್ಳಲು ಆಗುವುದೇ ಇಲ್ಲ. ಕೇರಳ, ಗೋವಾದವರು ಎನ್‌ಜಿಟಿ, ಕೇಂದ್ರ ಸರಕಾರ ಹೀಗೆ ಎಲ್ಲರಿಂದಲೂ ಅನುಮತಿ ಪಡೆದಿದ್ದಾರೆ. ಆದರೆ ನಾವು ಒದ್ದಾಡುತ್ತಿದ್ದೇವೆ. ಸಿಆರ್‌ಜೆಡ್ ನಿಂದಲೂ ಕರಾವಳಿಯವರು ತೊಂದರೆಗೆ ಒಳಗಾಗುತ್ತಿದ್ದಾರೆ. ಇದನ್ನು ಮೀರಿ ಕೆಲಸ ಮಾಡುವುದು ಹೇಗೆ ಎನ್ನುವುದರ ಬಗ್ಗೆ ನಾನು ಆಲೋಚಿಸಿದ್ದೇನೆ ಎಂದು ಉಲ್ಲೇಖಿಸಿದರು. ಮೊದಲು ಇದರ ಬಗ್ಗೆ ಪ್ರಾಥಮಿಕ ಸಭೆ ನಡೆಸಿದ ಮೇಲೆ ಮಂಗಳೂರಿಗೆ ತೆರಳಿ ಉಡುಪಿ ಸೇರಿದಂತೆ ಕರಾವಳಿ ಭಾಗದ ಎಲ್ಲರನ್ನು ಕರೆಸಿ ಚರ್ಚೆ ನಡೆಸೋಣ. ಏಕೆಂದರೆ ಈ ಭಾಗದಲ್ಲಿ ಉದ್ಯೋಗ ಸೃಷ್ಟಿಯಾಗಬೇಕು. ಜನರು ಮುಂಬೈ, ಗೋವಾಗಳಿಗೆ ತೆರಳುವುದು ತಪ್ಪಬೇಕು ಎಂದು ಅವರು ನುಡಿದರು.

# ಮೀನುಗಾರಿಕೆ ದೋಣಿ ನಿರ್ಮಾಣ: ಅರ್ಜಿ ಆಹ್ವಾನ

ಮಂಗಳೂರು – ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರಿಗೆ ಹೊಸದಾಗಿ ಯಾಂತ್ರೀಕೃತ ಮೀನುಗಾರಿಕಾ ದೋಣಿ ನಿರ್ಮಾಣ ಮಾಡಿ ಮೀನುಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಅನುವಾಗುವಂತೆ ಸಾಧ್ಯತಾ ಪತ್ರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ವೆಬ್‌ಸೈಟ್ ಮೂಲಕ URL:frims.karnataka.gov.in/ BCC ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ಅರ್ಜಿಯ 1 ಪ್ರತಿಯನ್ನು ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಸದಸ್ಯ ಕಾರ್ಯದರ್ಶಿ/ ಮೀನುಗಾರಿಕೆ ಉಪನಿರ್ದೇಶಕರು, ದ.ಕ. ಜಿಲ್ಲಾ ಪಂಚಾಯತ್ ಕಚೇರಿ ಕಟ್ಟಡ, ಮಂಗಳೂರು ವಿಳಾಸಕ್ಕೆ ಕಡ್ಡಾಯವಾಗಿ ಸಲ್ಲಿಸಬೇಕು.

# ಪರಿಶಿಷ್ಟ ಪಂಗಡಗಳ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

ಮಂಗಳೂರು – 2025–26ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡದವರ ಆರ್ಥಿಕ ಅಭಿವೃದ್ಧಿಗಾಗಿ ವಿವಿಧ ಕಲ್ಯಾಣ ಯೋಜನೆಗಳಿಗೆ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಡಿ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಛೇರಿ ಅಥವಾ ನಿಗಮಗಳ ವೆಬ್‌ಸೈಟ್ ಅಥವಾ ಕಲ್ಯಾಣಮಿತ್ರ ಏಕೀಕೃತ ಎಸ್.ಸಿ/ಎಸ್.ಟಿ ಸಹಾಯವಾಣಿ 9482300 400 ಸಂಪರ್ಕಿಸಬಹುದು ಕರ್ನಾಟಕ ಒನ್ ಹಾಗೂ ಗ್ರಾಮ ಒನ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು ಎಂದು ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

ಮಂಗಳೂರು–ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧೀನದಲ್ಲಿರುವ ಫರಂಗಿಪೇಟೆ ಮೌಲಾನ ಆಜಾದ್ ಮಾದರಿ ಪದವಿ ಪೂರ್ವ ಕಾಲೇಜು ಇಲ್ಲಿಗೆ ಭೌತಶಾಸ್ತ್ರ ಹಾಗೂ ಆಂಗ್ಲ ಭಾಷಾ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ. ತಿಂಗಳಿಗೆ ರೂ. 14,000 ವೇತನ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ದೂ.ಸಂ.9742972679 ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವಿಸ್ತರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಶಿವಮೊಗ್ಗ : ಮೈಸೂರು ವಿಶ್ವವಿದ್ಯಾನಿಲಯಕ್ಕೆ ಶಾಶ್ವತ ಸಂಯೋಜನೆಗೊಂಡಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಿದ್ಧಾರ್ಥನಗರ, ಮೈಸೂರು ಸಂಸ್ಥೆಯಲ್ಲಿ ಮಾಸ್ಟರ್ ಆಫ್ ವಿಜುಯಲ್ ಆರ್ಟ್ಸ್ ಎರಡು ಶೈಕ್ಷಣಿಕ ವರ್ಷದ ನಾಲ್ಕು ಸೆಮಿಸ್ಟರ್ ಸಿ.ಬಿ.ಸಿ.ಎಸ್ ಪದ್ಧತಿಯ ದೃಶ್ಯ ಕಲೆಯಲ್ಲಿ 2025–26ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಸ್ನಾತಕೋತ್ತರ ಪದವಿ ಪ್ರವೇಶಾತಿಗಾಗಿ ಬಿ.ವಿ.ಎ.ಪದವಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಂದ ಆಫ್ ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಈ ಕಾರ್ಯಾಲಯದ ದೂರವಾಣಿ ಸಂಖ್ಯೆ 0821–2438931 ಯನ್ನು ಸಂಪರ್ಕಿಸಬಹುದೆಂದು ಕಾಲೇಜಿನ ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಿವೇಶನ ಹಂಚಿಕೆಗೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಶಿವಮೊಗ್ಗ–ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿರುವ ಖಾಸಗಿ ಬಡಾವಣೆಗಳಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡುವ ಕುರಿತಾದ ಅರ್ಜಿ ಸಲ್ಲಿಸುವ ಅವಧಿಯನ್ನು ಸೆ.06 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಪ್ರಾಧಿಕಾರದ ವೆಬ್‌ಸೈಟ್ ಹಾಗೂ ಮೊ.ಸಂ.: 9980005678ನ್ನು ಸಂಪರ್ಕಿಸಬಹುದೆಂದು ಶಿವಮೊಗ್ಗ–ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿವಿಧ ಹುದ್ದೆಗಳಿಗೆ ಟೆಂಡರ್ ಆಹ್ವಾನ

ಮಡಿಕೇರಿ – ಕೊಡಗು ಜಿಲ್ಲೆ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಬೆರಳಚ್ಚುಗಾರರು (ಕಂಪ್ಯೂಟರ್ ಆಪರೇಟರ್), ವಾಹನ ಚಾಲಕರು ಮತ್ತು ಡಿ ಗ್ರೂಪ್ ಹುದ್ದೆಗೆ ಸೇವೆಯನ್ನು ಬಾಹ್ಯ ಮೂಲಕ ಪಡೆಯಲು ಇ-ಪ್ರೊಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಈ ಕಚೇರಿಯ ದೂ.ಸಂ.08272–225811ನ್ನು ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ತಿಳಿಸಿದ್ದಾರೆ.

# ನವೋದಯ ಶಾಲೆಗೆ ಅರ್ಜಿ ಸಲ್ಲಿಸಲು ಕಾಲಾವಕಾಶ

ಮಡಿಕೇರಿ:ಗಾಳಿಬೀಡು ಜವಾಹರ ನವೋದಯ ವಿದ್ಯಾಲಯದಲ್ಲಿ 2025–26ನೇ ಸಾಲಿಗೆ 6ನೇ ತರಗತಿಗೆ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದ್ದು ಅರ್ಜಿ ಸಲ್ಲಿಸಲು ಆಗಸ್ಟ್ 27ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗೆ ನವೋದಯ ಶಾಲೆಯನ್ನು, ದೂರವಾಣಿ ಸಂಖ್ಯೆ 9481426184, 9380802179ನ್ನು ಸಂಪರ್ಕಿಸಬಹುದು ಎಂದು ಜವಾಹರ ನವೋದಯ ವಿದ್ಯಾಲಯದ ಪ್ರಾಂಶುಪಾಲರಾದ ಸಿ.ವಿ. ಪ್ರಮೀಳ ಅವರು ತಿಳಿಸಿದ್ದಾರೆ.

# ಡಾ.ಎಂ.ಮೋಹನ ಆಳ್ವರಿಗೆ 'ಎಮಿನೆಂಟ್ ಬಂಟ್ ಪರ್ಸನಾಲಿಟಿ ಅವಾರ್ಡ್'




ಮಂಗಳೂರು : ವಿಶ್ವ ಬಂಟ ಪ್ರತಿಷ್ಠಾನ ಟ್ರಸ್ಟ್‌ನ 29ನೇ ವಾರ್ಷಿಕ ಮಹಾಸಭೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಆ.23ರಂದು ನಗರದ ಎ.ಜೆ.ಗ್ರಾಂಡ್ ಹೋಟೆಲ್‌ನಲ್ಲಿ ನಡೆಯಲಿದೆ. ವಿಶ್ವ ಬಂಟ ಪ್ರತಿಷ್ಠಾನ ಟ್ರಸ್ಟ್ ಅಧ್ಯಕ್ಷ ಡಾ.ಎ.ಜೆ.ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ವಾರ್ಷಿಕ ಮಹಾಸಭೆ ನಡೆಯಲಿದೆ. ಮೂಡುಬಿದಿರೆಯ ಆಳ್ವಾಸ್ ಎಜ್ಯುಕೇಶನ್ ಟ್ರಸ್ಟ್‌ನ ಚೇರ್ಮನ್ ಡಾ.ಎಂ.ಮೋಹನ ಆಳ್ವ ಅವರಿಗೆ 'ಎಮಿನೆಂಟ್ ಬಂಟ್ ಪರ್ಸನಾಲಿಟಿ ಅವಾರ್ಡ್' ಪ್ರದಾನ ಮಾಡಲಾಗುವುದು. ಹಿರಿಯ ಯಕ್ಷಗಾನ ಕಲಾವಿದ ಸಂಜಯ ಕುಮಾರ್ ಶೆಟ್ಟಿ ಗೋಣಿಬೀಡು ಅವರಿಗೆ ದಿ.ಡಾ.ಡಿ.ಕೆ.ಚೌಟ ದತ್ತಿನಿಧಿ ಪ್ರಶಸ್ತಿ, ಕೃಷಿ ಕ್ಷೇತ್ರದ ಸಾಧನೆಗಾಗಿ ಇಂದಿರಾ ಶೆಟ್ಟಿ ಅವರಿಗೆ ದಿ.ಎಣ್ಮಕಜೆ ಕಲಾವತಿ ಶೆಟ್ಟಿ ದತ್ತಿನಿಧಿ ಪ್ರಶಸ್ತಿ, ಸಿಎ ಅಂತಿಮ ಪರೀಕ್ಷೆಯಲ್ಲಿ 24ನೇ ರ್‍ಯಾಂಕ್ ಪಡೆದ ಸಿಎ ನಿಶ್ಚಲ್ ರೈ ಅವರಿಗೆ ಸಿಎ ವೈ.ಆರ್.ಶೆಟ್ಟಿ ದತ್ತಿನಿಧಿ ಪ್ರಶಸ್ತಿ ಹಾಗೂ ಸಿಎ ರಕ್ಷಾ. ಆರ್.ಶೆಟ್ಟಿ ಅವರಿಗೆ ಸಿಎ ಗೋಪಾಲ್.ಬಿ.ಶೆಟ್ಟಿ ದತ್ತಿನಿಧಿ ಪ್ರಶಸ್ತಿ ವಿತರಿಸಲಾಗುವುದೆಂದು ವಿಶ್ವ ಬಂಟ ಪ್ರತಿಷ್ಠಾನದ ಕಾರ್ಯದರ್ಶಿ ಸಿಎ ಸುಧೀರ್ ಕುಮಾರ್ ಶೆಟ್ಟಿ ತಿಳಿಸಿದ್ದಾರೆ.

# ಪ್ರಧಾನ ಮಂತ್ರಿ ಸ್ವನಿಧಿ ಸಾಲ ಯೋಜನೆಯನ್ನು ತಡೆ : ಪ್ರತಿಭಟನೆ




ಮಂಗಳೂರು: ಬೀದಿಬದಿ ವ್ಯಾಪಾರಿಗಳ ಸ್ವಾವಲಂಬಿ ಬದುಕಿಗಾಗಿ ಜಾರಿ ಮಾಡಿದ್ದ ಪಿ.ಎಂ.ಸ್ವನಿಧಿ ಸಾಲ ಯೋಜನೆಯನ್ನು ತಡೆಹಿಡಿದಿರುವ ಕ್ರಮವನ್ನು ವಿರೋಧಿಸಿ, ಬೀದಿಬದಿ ವ್ಯಾಪಾರಿಗಳ ಮೇಲಿನ ದಾಳಿ ದಬ್ಬಾಳಿಕೆ ಖಂಡಿಸಿ ಮಂಗಳವಾರ ದ.ಕ ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಸಂಘ (CITU) ನೇತೃತ್ವದಲ್ಲಿ ಮಂಗಳೂರು ಮಹಾನಗರ ಪಾಲಿಕೆ ಎದುರು ಪ್ರತಿಭಟನಾ ಪ್ರದರ್ಶನ ನಡೆಯಿತು. ಪ್ರತಿಭಟನೆಗೂ ಮುನ್ನ ಬಲ್ಲಾಳ್‌ಭಾಗ್‌ನಿಂದ ಪಾಲಿಕೆ ಕಚೇರಿವರೆಗೆ ಬೀದಿ ವ್ಯಾಪಾರಿಗಳಿಂದ ಮೆರವಣಿಗೆ ನಡೆಯಿತು. ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ಬೀದಿಬದಿ ವ್ಯಾಪಾರಿಗಳು, ಕೂಡಲೇ ಸ್ವನಿಧಿ ಸಾಲ ಯೋಜನೆ ಪುನರಾರಂಭಿಸಲು ಒತ್ತಾಯಿಸಿದರು. ಬಳಿಕ ಮಂಗಳೂರು ಮಹಾನಗರ ಪಾಲಿಕೆಯ ಉಪ ಆಯುಕ್ತರ ಮೂಲಕ ಜಿಲ್ಲಾಧಿಕಾರಿ ಹಾಗೂ ಆಡಳಿತಾಧಿಕಾರಿಗೆ ಮನವಿ ಸಲ್ಲಿಸಿದರು.

# ಸವಣೂರು ಪರಿಸರದಲ್ಲಿ ಭಾರಿ ಗಾಳಿ ಮಳೆ : ಅಪಾರ ಹಾನಿ



ಪುತ್ತೂರು: ಕಡಬ ತಾಲೂಕಿನ ಸವಣೂರು ಪರಿಸರದಲ್ಲಿ ಮಂಗಳವಾರ ಮುಂಜಾನೆ ಬೀಸಿದ ಭಾರೀ ಗಾಳಿಯಿಂದಾಗಿ ಹಲವೆಡೆ ಹಾನಿಗಳಾಗಿದ್ದು, ಅಪಾರ ಪ್ರಮಾಣದ ನಷ್ಟಗಳುಂಟಾಗಿವೆ. ಸವಣೂರು ಮೆಸ್ಕಾಂ ಉಪವಿಭಾಗದ ಸವಣೂರು ಗ್ರಾಮದ ಕೆಡೆಂಜಿ, ಆರೇಲ್ತಡಿ, ಕುದ್ಮನಮಜಲು, ಪಟ್ಟೆ ಮಡಕೆ, ಕುದ್ಮಾರು ಗ್ರಾಮದ ಅನ್ಯಾಡಿ ಪರಿಸರದಲ್ಲಿ ಮರ ಬಿದ್ದು ಸುಮಾರು ವಿದ್ಯುತ್ ಕಂಬಗಳು ಮುರಿದು ವಿದ್ಯುತ್ ಸಂಪರ್ಕ ಕಡಿತವಾಗಿದೆ. ಆರೇಲ್ತಡಿ ಕೊರಗಜ್ಜನ ಕಟ್ಟೆ, ದೈವಸ್ಥಾನದ ಪ್ರದೇಶ, ವಾಸದ ಮನೆಗಳು, ಅಡಿಕೆ, ತೆಂಗಿನ ಮರಗಳು ಸೇರಿದಂತೆ ಲಕ್ಷಾಂತರ ನಷ್ಟ ಉಂಟಾಗಿದೆ.

# ಕಡಲತೀರಕ್ಕೆ ಬಂದಿದ್ದ ಡಾಲ್ಫಿನ್ ರಕ್ಷಣೆ




ಕಾರವಾರ: ಅಲೆಗಳ ಅಬ್ಬರದಿಂದಾಗಿ ತಾಲ್ಲೂಕಿನ ದೇವಬಾಗ ಕಡಲತೀರಕ್ಕೆ ಬಂದಿದ್ದ ಡಾಲ್ಫಿನ್ ಮರಿಯನ್ನು ಇಲ್ಲಿನ ಜಂಗಲ್ ಲಾಡ್ಜಸ್ ಆಯಂಡ್ ರೆಸಾರ್ಟ್ ಸಿಬ್ಬಂದಿ ಸೋಮವಾರ ಪುನಃ ಸಮುದ್ರಕ್ಕ ಬಿಟ್ಟು, ರಕ್ಷಿಸಿದರು. ಚಂಡಮಾರುತದ ಕಾರಣದಿಂದ ಅರಬ್ಬಿ ಸಮುದ್ರ ಪ್ರಕ್ಷುಬ್ಧಗೊಂಡಿದೆ. ಅಬ್ಬರದ ಅಲೆಗಳಿಗೆ ಸಿಲುಕಿದ ಇಂಡೋ ಫೆಸಿಫಿಕ್ ಹಂಪ್ ಬ್ಯಾಕ್ ತಳಿಯ ಡಾಲ್ಫಿನ್ ಮರಿ ರೆಸಾರ್ಟ್ ಸಮೀಪದ ಕಡಲತೀರಕ್ಕೆ ಬಂದು ಬಿದ್ದಿತ್ತು. ನೀರಿಗೆ ಸಾಗಲು ಒದ್ದಾಡುತ್ತಿತ್ತು. ಇದನ್ನು ಗಮನಿಸಿದ ರೆಸಾರ್ಟ್‌ನಲ್ಲಿ ತಂಗಿದ್ದ ಪ್ರವಾಸಿಗರು ಸಿಬ್ಬಂದಿ ಗಮನಕ್ಕೆ ತಂದಿದ್ದರು. ಸಿಬ್ಬಂದಿ ನೀಲೇಶ್, ಸುನೀಲ್ ಮತ್ತು ಸಂತೋಷ್ ಡಾಲ್ಫಿನ್ ಮರಿಯನ್ನು ಪುನಃ ಸಮುದ್ರಕ್ಕೆ ಸೇರಿಸಿದರು.

# ವೆನ್ಲಾಕ್ ಆಸ್ಪತ್ರೆಗೆ ಆಂಬುಲೆನ್ಸ್ ಬಗ್ಗಿ ಭಾಗ್ಯ



ಮಂಗಳೂರು : ವಿದಾನ ಪರಿಷತ್ ಸದಸ್ಯರಾದ ಮಾನ್ಯ ಐವಾನ್ ಡಿಸೋಜ ರವರು ವೆನ್ಲಾಕ್ ಆಸ್ಪತ್ರೆಗೆ MLC ಲ್ಯಾಡ್‌ನಿಂದ Ambulance buggy ಕೊಡಿಸಿದ್ದಾರೆ. ಇದು ರೋಗಿಗಳಿಗೆ ಒಂದು ಕಟ್ಟಡದಿಂದ ಇನ್ನೊಂದು ಕಟ್ಟಡಕ್ಕೆ ತೆರಳಲು ಬಹಳ ಅನುಕೂಲ. ಹೊಸ ಕಟ್ಟಡದಲ್ಲಿ ಶಸ್ತ್ರ ಚಿಕಿತ್ಸೆ ಆದರೆ ಒಂದೆರಡು ದಿವಸ ಆದ ಮೇಲೆ ಹಳೆ ಕಟ್ಟಡಕ್ಕೆ ರೋಗಿಗಳನ್ನ ಸ್ಥಳಾಂತರ ಮಾಡಬೇಕಾಗುತ್ತೆ. CT /MRI / X ray / scanningಗೆ ರೋಗಿಗಳನ್ನ ಕರೆದು ಕೊಂಡು ಹೋಗಲು ಬಹಳ ಉಪಯುಕ್ತ. ಆಸ್ಪತ್ರೆಯ ಜಿಲ್ಲಾ ಶಸ್ತ್ರ ಚಿಕಿತ್ಸಕರು ಹಾಗೂ ಅಧೀಕ್ಷಕರು ಹಾಗೂ ಆಸ್ಪತ್ರೆಯ ಎಲ್ಲಾ ಸಿಬ್ಬಂದಿ ವರ್ಗದವರು ಮಾನ್ಯ ಐವಾನ್ ಡಿಸೋಜ ಅವರಿಗೆ ಧನ್ಯವಾದ ಅರ್ಪಿಸಿದ್ದಾರೆ. ರೋಗಿಗಳಿಗೆ ಬಹಳ ಉಪಯುಕ್ತ ಎಂದು ತಿಳಿಸಿದ್ದಾರೆ. ಈ ವ್ಯವಸ್ತೆ ಯಾವ ಸರ್ಕಾರಿ ಆಸ್ಪತ್ರೆಗಳಲ್ಲಿ ಇಲ್ಲದಿರಬಹುದು ಎಂದು ತಿಳಿಸಿದ್ದಾರೆ.

# ರಾಜಣ್ಣ ಹುದ್ದೆಯಿಂದ ತೆರವಾಗಿರುವುದು ವಿಷಾದಕರ ಎಮ್. ಎನ್. ಆರ್.



ಮಂಗಳೂರು: ಸಹಕಾರ ರಂಗದ ಹಿರಿಯ ನಾಯಕರಾಗಿ ರಾಜ್ಯದಲ್ಲಿ ಸಹಕಾರ ಕ್ಷೇತ್ರಕ್ಕೆ ಹೊಸ ಸಂಚಲನವನ್ನು ಮೂಡಿಸಿದ್ದ ಕೆ.ಎನ್. ರಾಜಣ್ಣ ಅವರನ್ನು ಸಹಕಾರ ಸಚಿವ ಹುದ್ದೆಯಿಂದ ತೆರವುಗೊಳಿಸಿರುವುದಕ್ಕೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಅವರು ವಿಷಾದ ವ್ಯಕ್ತಪಡಿಸಿದ್ದಾರೆ. 'ನನಗೆ ಕೆ.ಎನ್.ರಾಜಣ್ಣ ಅವರೊಂದಿಗೆ ಸುಮಾರು 28 ವರ್ಷಗಳ ಒಡನಾಟವಿದೆ. ಅವರು ಸಹಕಾರ ಕ್ಷೇತ್ರವನ್ನು ತಳಮಟ್ಟದಿಂದಲೇ ತಿಳಿದುಕೊಂಡವರು. ಅವರು ಗ್ರಾಮಮಟ್ಟದ ಸಹಕಾರ ಸಂಘಗಳಿಗೂ ಪ್ರಾಧಾನ್ಯತೆಯನ್ನು ನೀಡುತ್ತಿದ್ದರು. ಇದರಿಂದಾಗಿ ರಾಜ್ಯದಲ್ಲಿ ಸಹಕಾರ ಕ್ಷೇತ್ರ ಭದ್ರ ನೆಲೆಯನ್ನು ಕಂಡಿದೆ. ಹಾಗೂ ಸಹಕಾರ ಕ್ಷೇತ್ರ ಸಾಕಷ್ಟು ಅಭಿವೃದ್ಧಿ ಸಾಧಿಸಿತ್ತು. ಅವರ ತೆರವಾದ ಸ್ಥಾನದಿಂದ ಸಹಕಾರ ಕ್ಷೇತ್ರಕ್ಕೆ ಆಘಾತವನ್ನು ತಂದಿದೆ ಎಂದು ಪ್ರತಿಕ್ರಿಯೆ ನೀಡಿದ್ದಾರೆ. ಸರಕಾರ ಕ್ಷೇತ್ರದಲ್ಲಿ ಅವಿರತ ಸೇವೆಯನ್ನು ಸಲ್ಲಿಸುತ್ತಿದ್ದ ಇವರ ಸೇವೆ ರಾಜ್ಯಕ್ಕೆ ಇನ್ನೂ ಅಗತ್ಯವಿತ್ತು. ಇವರು ಸಹಕಾರ ಸಚಿವ ಹುದ್ದೆಯಿಂದ ತೆರವಾಗಿರುವುದು ಬೇಸರ ತಂದಿದೆ ಎಂದು ಡಾ. ಎಂ.ಎನ್.ರಾಜೇಂದ್ರ ಕುಮಾರ್ ಅವರು ಹೇಳಿದ್ದಾರೆ.

# ಯಕ್ಷಧ್ರುವ ಪಟ್ಲದಿಂದ ಅಪಘಾತ ವಿಮಾ ಪರಿಹಾರ ವಿತರಣೆ



ಮಂಗಳೂರು: ಕಳೆದ ಮೂರು ವರ್ಷಗಳಿಂದ ಪಟ್ಲ ಶ್ರೀ ಸತೀಶ್ ಶೆಟ್ಟಿ ನೇತೃತ್ವದ ಯಕ್ಷ ಧ್ರುವ ಪಟ್ಲ ಫೌಂಡೇಶನ್ ಯಕ್ಷಗಾನ, ರಂಗಭೂಮಿ, ದೈವಾರಾಧನೆ ಮತ್ತು ಕಂಬಳ ಕ್ಷೇತ್ರದ ಸಾವಿರಾರು ಕಲಾವಿದರಿಗೆ ಮಂಗಳೂರು ಅಂಚೆ ವಿಭಾಗದ ಸಹಯೋಗದಲ್ಲಿ ಉಚಿತವಾಗಿ ಅಪಘಾತ ವಿಮಾ ಸುರಕ್ಷೆಯನ್ನು ಪ್ರಾಯೋಜಿಸುತ್ತಿದ್ದು ಇತ್ತೀಚೆಗೆ ಅಪಘಾತಕ್ಕೊಳಗಾಗಿ ನಿಧನರಾದ ಯಕ್ಷಗಾನ ಕಲಾವಿದರಾದ ಆನಂದ ಮತ್ತು ಪ್ರವೀತ್ ಅವರ ಕುಟುಂಬಗಳಿಗೆ ತಲಾ ರೂ. ಹತ್ತು ಲಕ್ಷದ ವಿಮಾ ಪರಿಹಾರವನ್ನು ವಿತರಣೆ ಮಾಡಲಾಯಿತು. ಹಿರಿಯ ಅಂಚೆ ಅಧೀಕ್ಷಕರ ಕಚೇರಿ ಬಲ್ಮಠ ಇಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಪಟ್ಲ ಸತೀಶ್ ಶೆಟ್ಟಿಯವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಪರಿಹಾರ ಮೊತ್ತದ ಚೆಕ್ ನ್ನು ವಿತರಿಸಿದರು. ಇದರ ಹಿಂದೆ ಫೌಂಡೇಶನ್‌ನ ಸರ್ವ ಪದಾಧಿಕಾರಿಗಳು ಮತ್ತು ಸದಸ್ಯರ ಶ್ರಮವಿದೆ. ಕಳೆದ ಮೂರು ವರ್ಷಗಳಿಂದ ಅಪಘಾತ ವಿಮೆಯನ್ನು ಅತ್ಯಂತ ಶ್ರದ್ಧೆ ಮತ್ತು ಶಿಸ್ತಿನಿಂದ ಮಾಡಿಸುವುದಷ್ಟೇ ಅಲ್ಲ ಕ್ಲೇಮ್‌ಗಳು ಬಂದಾಗ ಅದರ ತ್ವರಿತ ವಿಲೇವಾರಿಗೂ ಶ್ರಮಿಸುತ್ತಿರುವ ಅಂಚೆ ಇಲಾಖೆಯ ಸಿಬಂದಿಗಳನ್ನು ಅವರು ಈ ಸಂದರ್ಭದಲ್ಲಿ ಅಭಿನಂದಿಸಿ ಗೌರವಿಸಿದರು.

# ತಾಲೂಕು ಮಟ್ಟದ ಗ್ಯಾರಂಟಿ ಯೋಜನೆ ಪ್ರಗತಿ ಪರಿಶೀಲನೆ




ಮಂಗಳೂರು : ಮಂಗಳೂರು ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಅಧ್ಯಕ್ಷ ಸುರೇಂದ್ರ ಕಂಬಳಿ ಅಧ್ಯಕ್ಷತೆಯಲ್ಲಿ ಮಂಗಳೂರು ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಗತಿ ಪರಿಶೀಲನೆ ಸಭೆ ಮಂಗಳವಾರ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಪ್ರಗತಿ ಪರಿಶೀಲನೆ ಸಭೆ ಜರುಗಿತು. ಗೃಹಲಕ್ಷ್ಮೀ ಯೋಜನೆಯಡಿ ಮಂಗಳೂರು ತಾಲೂಕಿನಲ್ಲಿ ಪ್ರಸ್ತುತ 85044 ಫಲಾನುಭವಿಗಳು ನೋಂದಣಿಯಾಗಿದ್ದು, ಈವರೆಗೆ 305,04,48000ಮಂಜೂರಾಗಿರುತ್ತದೆ ಎಂದು ಸಭೆಗೆ ನಗರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಾಹಿತಿ ನೀಡಿದರು. ಸಭೆಯಲ್ಲಿ ತಾಲೂಕು ಪಂಚಾಯತ್ ಸಹಾಯಕ ಲೆಕ್ಕಾಧಿಕಾರಿ ಪರಮೇಶ್ವರ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಮಹೇಶ್ ಕುಮಾರ್ ಹೊಳ್ಳ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರಾದ ಆಲ್ವಿನ್ ಡಿಕುನ್ಹ, ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರಾದ ರಾಜೇಶ್ ಶೆಟ್ಟಿ, ಪ್ರಶಾಂತ್ ಎಸ್, ನವಾಜ್, ಶೈಲಾ ನೀತಾ ಡಿಸೋಜಾ, ಮೊಹಮ್ಮದ್ ರಫೀಕ್, ರಿತೇಶ್ ಅಂಚನ್, ಜಯಂತಿ, ವಿದ್ಯಾ, ಡಿ.ಎಂ. ಮುಸ್ತಾಫ ಮತ್ತಿತರರು ಉಪಸ್ಥಿತರಿದ್ದರು.

# ಲಾರ್ವಾ ತಾಣಗಳು ಕಂಡುಬಂದರೆ ದಂಡ : ಮಹಾನಗರಪಾಲಿಕೆ




ಮಂಗಳೂರು : ಡೆಂಗ್ಯು ಜ್ವರ ಪ್ರಕರಣಗಳು ದಿನೇದಿನೇ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಅದರ ನಿಯಂತ್ರಣ ನಮ್ಮೆಲ್ಲರ ಹೊಣೆಯಾಗಿರುತ್ತದೆ. ಈಡೀಸ್ ಸೊಳ್ಳೆಗಳಿಂದ ಹರಡುವ ಕಾಯಿಲೆ ಮುಂಗಾರು/ ಮುಂಗಾರಿನ ನಂತರ ಕಾಣಸಿಗುತ್ತಿದೆ. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಇಡೀ ವರ್ಷ ಪ್ರಕರಣಗಳು ಕಂಡು ಬರುತ್ತಿವೆ. ಬಿಟ್ಟು ಬಿಟ್ಟು ಸುರಿವ ಮಳೆಯಿಂದ ಈಡೀಸ್ ಸೊಳ್ಳೆಗಳ ಉತ್ಪತ್ತಿ ತಾಣಗಳ ಸಂಖ್ಯೆಯು ಹೆಚ್ಚಾಗುತ್ತಿದ್ದು, ಡೆಂಗ್ಯು ಜ್ವರ ಪ್ರಕರಣಗಳು ಹೆಚ್ಚಾಗುತ್ತಿದೆ. ಡೆಂಗ್ಯು ಜ್ವರವು ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿ ಕಾಡುತ್ತಿದ್ದು, ಸಾಂಕ್ರಾಮಿಕ ಸ್ಫೋಟದ ಸಾಧ್ಯತೆಯ ಅಧಿಕವಾಗಬಹುದು. ಆದ್ದರಿಂದ ಮಹಾನಗರ ಪಾಲಿಕೆಯಲ್ಲಿ ಸಕ್ರೀಯವಾಗಿ ತಂಡವಾರು ಲಾರ್ವ ಸಮೀಕ್ಷೆಯೊಂದಿಗೆ ಸಂಪೂರ್ಣ ಲಾರ್ವ ಉತ್ಪತ್ತಿ ತಾಣಗಳ ನಿಯಂತ್ರಣದೊಂದಿಗೆ ಆರೋಗ್ಯ ಜಾಗೃತಿ ಮನೆಮನೆಗೂ ಕ್ಷೇತ್ರ ಭೇಟಿಯೊಂದಿಗೆ ಮುಟ್ಟಿಸಬೇಕು. ಅದೇ ರೀತಿ ಲಾರ್ವ ಉತ್ಪತ್ತಿ ತಾಣಗಳು ಕಂಡುಬಂದ ಕಟ್ಟಡ/ಮನೆ ಹಾಗೂ ಅಪಾರ್ಟ್‌ಮೆಂಟ್‌ಗಳಿಗೆ ಸಂಬಂಧಿಸಿ ದಂಡವನ್ನು ವಿಧಿಸಬೇಕು ಎಂದು ಮಹಾನಗರಪಾಲಿಕೆ ಆಯುಕ್ತ ರವಿಚಂದ್ರ ನಾಯಕ್ ಸೂಚಿಸಿದ್ದಾರೆ.

# ದ.ಕ. ಜಿಲ್ಲಾ ಮಹಿಳಾ ಕಾಂಗ್ರೆಸ್ ಪದಗ್ರಹಣ ಸಮಾರಂಭ



ಮಂಗಳೂರು:ದ.ಕ.ಜಿಲ್ಲಾ ಮಹಿಳಾ ಕಾಂಗ್ರೆಸ್ ಪದಗ್ರಹಣ ಸಮಾರಂಭ ಮಲ್ಲಿಕಟ್ಟೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯ ರೆಡ್ಡಿಯವರು ದೀಪ ಬೆಳಗಿಸಿ ಉದ್ಘಾಟಿಸಿದರು. ದ.ಕ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿಯ ನಗರ ಅಧ್ಯಕ್ಷೆಯಾಗಿ ಮಾಜಿ ಕಾರ್ಪೊರೇಟರ್ ಕುಮಾರಿ ಅಪ್ಪಿ ಹಾಗೂ ಗ್ರಾಮಾಂತರ ಅಧ್ಯಕ್ಷೆಯಾಗಿ ಉಷಾ ಅಂಚನ್ ಅವರಿಗೆ ಕಾಂಗ್ರೆಸ್ ಧ್ವಜವನ್ನು ನೀಡುವ ಮೂಲಕ ಅಧಿಕಾರವನ್ನು ಹಸ್ತಾಂತರಿಸಲಾಯಿತು.ರಾಜ್ಯ ಮಹಿಳಾ ಕಾಂಗ್ರೆಸ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನಮಿತಾ ಡಿ ರಾವ್ ಮತ್ತು ರಾಜ್ಯ ಕಾರ್ಯದರ್ಶಿಯಾಗಿ ಝೀನತ್ ಅವರನ್ನು ನೇಮಕ ಮಾಡಲಾಗಿದೆ. ಈ ಸಂಧರ್ಭದಲ್ಲಿ ಮಾಜಿ ಸಚಿವ ರಮಾನಾಥ ರೈ, ಮಾಜಿ ಮೇಯರ ಶಶಿಧರ ಹೆಗ್ಡೆ, ಪದ್ಮರಾಜ್ ಪೂಜಾರಿ, ಸದಾಶಿವ ಉಳ್ಳಾಲ್ ಮಮತಾ ಗಟ್ಟಿ, ಶಾಲೆಟ್ ಪಿಂಟೊ, ಮಂಜುಳ ನಾಯಕ್, ಶಕುಂತಲಾ ಕಾಮತ್, ನಮಿತಾ.ಡಿ.ರಾವ್ ಹಾಗು ಇನ್ನಿತರರು ಉಪಸ್ಥಿತರಿದ್ದರು.

# ದ.ಕ ಕಿರಿಯರ ಅಥ್ಲೆಟಿಕ್ಸ್ ಕ್ರೀಡಾಕೂಟ 2025ನಲ್ಲಿ ಆಳ್ವಾಸ್‌ಗೆ 55 ಪದಕ



ಮೂಡುಬಿದಿರೆ : ದಕ್ಷಿಣ ಕನ್ನಡ ಅಥ್ಲೆಟಿಕ್ಸ್ ಸಂಸ್ಥೆಯ ವತಿಯಿಂದ ನಡೆದ ದಕ್ಷಿಣ ಕನ್ನಡ ಕಿರಿಯರ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಆಳ್ವಾಸ್ ಸ್ಪೋರ್ಟ್ಸ್ ಕ್ಲಬ್‌ನ ವಿದ್ಯಾರ್ಥಿಗಳು 22 ಚಿನ್ನ, 21 ಬೆಳ್ಳಿ, 12 ಕಂಚಿನ ಪದಕದೊಂದಿಗೆ ಒಟ್ಟು 55 ಪದಕಗಳನ್ನು ಪಡೆದುಕೊಂಡರು. ಆಗಸ್ಟ್ 23ರಿಂದ 25ರವರೆಗೆ ಉಡುಪಿ ಜಿಲ್ಲೆಯ ಅಜ್ಜರಕಾಡು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುವ ರಾಜ್ಯ ಮಟ್ಟದ ಕಿರಿಯರ ಹಿರಿಯರ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಆಳ್ವಾಸ್ ಸ್ಪೋರ್ಟ್ಸ್ ಕ್ಲಬ್‌ನಿಂದ ಕಿರಿಯರ ವಿಭಾಗದಲ್ಲಿ 60 ವಿದ್ಯಾರ್ಥಿಗಳು ಹಾಗೂ ಹಿರಿಯರ ವಿಭಾಗದಲ್ಲಿ 30 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 90 ಕ್ರೀಡಾಪಟುಗಳು ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿರುವುದು ಹೆಮ್ಮೆಯ ವಿಚಾರವಾಗಿದೆ. ರಾಜ್ಯ ಮಟ್ಟದ ಕ್ರೀಡಾಕೂಟಕ್ಕೆ ದ.ಕ. ಜಿಲ್ಲೆಯನ್ನು ಪ್ರತಿನಿಧಿಸುತ್ತಿರುವ ಕ್ರೀಡಾಪಟುಗಳಲ್ಲಿ ಅತೀ ಹೆಚ್ಚು ಕ್ರೀಡಾಪಟುಗಳು ಆಳ್ವಾಸ್ ಸ್ಪೋರ್ಟ್ಸ್ ಕ್ಲಬ್‌ನಿಂದ ಪ್ರತಿನಿಧಿಸುತ್ತಿದ್ದಾರೆ.

# ಆಸ್ಟ್ರೋ ಮೋಹನ್‌ಗೆ ಗೌರವ ಫೆಲೋಶಿಪ್



ಉಡುಪಿ: ವಿಶ್ವ ಛಾಯಾಗ್ರಹಣ ದಿನದಂದು, ಖ್ಯಾತ ಛಾಯಾಚಿತ್ರ ಪತ್ರಕರ್ತ ಆಸ್ಟ್ರೋ ಮೋಹನ್ ಅವರಿಗೆ ಅಮೆರಿಕದ ಇಮೇಜ್ ಕಾಲಿಗ್ ಸೊಸೈಟಿ ಇಂಟರ್‌ನ್ಯಾಷನಲ್ ವತಿಯಿಂದ ಅತ್ಯುನ್ನತ ಗೌರವಗಳಲ್ಲಿ ಒಂದಾದ ಹಾನರರಿ ಫೆಲೋಶಿಪನ್ನು ಪ್ರದಾನ ಮಾಡಲಾಗಿದೆ. ಶ್ರೀ ಟೋನಿ ಲೀ ಕಿಮ್ ಥುವಾನ್ APSA, Hon.EFIAP, ಕು. ಸಾರಾ ತೈ ಮೇಲಿನ್ ARPS ಹಾಗೂ ICS ಗೌರವ ಸಮಿತಿ ಅವರ ನೇತೃತ್ವದಲ್ಲಿ ನೀಡಲಾದ ಈ ಪ್ರಶಸ್ತಿ, ಛಾಯಾಗ್ರಹಣ ಕಲೆ ಹಾಗೂ ಸಂಸ್ಕೃತಿಯ ಅಭಿವೃದ್ಧಿಗೆ, ಭಾರತ ಹಾಗೂ ಜಾಗತಿಕ ಮಟ್ಟದಲ್ಲಿ ಆಸ್ಟ್ರೋ ಮೋಹನ್ ನೀಡಿದ ಅಮೂಲ್ಯ ಕೊಡುಗೆಗಳನ್ನು ಗೌರವಿಸುತ್ತದೆ. ಉದಯವಾಣಿ ಕನ್ನಡ ದಿನಪತ್ರಿಕೆಯ ಹಿರಿಯ ಪತ್ರಿಕಾ ಛಾಯಾಗ್ರಾಹಕರಾಗಿರುವ ಆಸ್ಟ್ರೋ ಮೋಹನ್, 1994ರಿಂದ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ.




# ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘ(ಕಾನ್ಫಿಡ)ದಲ್ಲಿ ಅದ್ದೂರಿ ಸ್ವಾತಂತ್ರ್ಯ ದಿನಾಚರಣೆ..

ನಮ್ಮ ಭಾರತ ದೇಶವು ಸ್ವಾತಂತ್ರ್ಯ ಪಡೆದು 78 ವರ್ಷಗಳನ್ನು ಕಳೆದು 79ನೇ ಸಂವತ್ಸರಕ್ಕೆ ಮುಂದಡಿ ಇಡುವ ಈ ಶುಭಸಂದರ್ಭದಲ್ಲಿ ಶ್ರೀಯುತ ಪುಟ್ಟಣ್ಣ ಕಣಗಾಲರು ಲಕ್ಷ್ಮೀನಾರಾಯಣ್, ಸಿದ್ದಲಿಂಗಯ್ಯ, ಕೆಎಸ್‌ಎಲ್ ರವಿ, ರಾಜೇಂದ್ರ ಸಿಂಗ್ ಬಾಬು, ನಾಗಾಭರಣ, ಜೋಸೈಮನ್ ಮುಂತಾದ ಅಗ್ರಗಣ್ಯ ಹಿರಿಯ ಚಲನಚಿತ್ರ ನಿರ್ದೇಶಕರು ಕಟ್ಟಿರುವ ಕರ್ನಾಟಕ ಚಲನಚಿತ್ರ ನರ್ದೇಶಕರ ಸಂಘ ಆಗಸ್ಟ್ 15 2025ರಂದು ಬೆಳಿಗ್ಗೆ ಗಾಂಧಿನಗರದಲ್ಲಿರುವ ಸಂಘದ ಕಛೇರಿಯ ಮುಂಭಾಗದಲ್ಲಿ 79ನೇ ಸ್ವಾತಂತ್ರೋತ್ಸವನ್ನು ಹಿರಿಯ ಕಲಾವಿದರಾದ ಮತ್ತು ನಿರ್ದೇಶಕರೂ ಆದ ಶ್ರೀಯುತ ರಮೇಶ್ ಭಟ್ ಅವರು ಧ್ವಜಾರೋಹಣ ಮಾಡುವ ಮುಖಾಂತರ ಆಚರಿಸಲಾಯಿತು. ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಅದ್ಯಕ್ಷರಾದ ಎನ್ನಾರ್ ಕೆ ವಿಶ್ವನಾಥ್ ಅವರ ಅಧ್ಯಕ್ಷತೆಯಲ್ಲಿ ನಡೆದ



ಈ ಸ್ವಾತಂತ್ರ್ಯೋತ್ಸವದಲ್ಲಿ ಹಿರಿಯ ಕಿರಿಯ ಚಲನಚಿತ್ರ ನಿರ್ದೇಶಕರುಗಳು, ಕರ್ನಾಟಕ ಚಲನಚಿತ್ರ ಕಾರ್ಮಿಕರ, ತಂತ್ರಜ್ಞರ, ಕಲಾವಿದರ ಒಕ್ಕೂಟದ ನೂತನ ಅಧ್ಯಕ್ಷರಾದ ಸೋಮಶೇಖರ್ ಮತ್ತು ಪದಾಧಿಕಾರಿಗಳು ಹಾಗೂ ನಿರ್ದೇಶಕರ ಸಂಘದ ಉಪಾಧ್ಯಕ್ಷರಾದ ಜಗದೀಶ್ ಕೊಪ್ಪ, ಕಾರ್ಯದರ್ಶಿಗಳಾದ ಟಾಪ್ ಸ್ಟಾರ್ ರೇಣುಕುಮಾರ್, ಜಂಟಿ ಕಾರ್ಯದರ್ಶಿಗಳಾದ ಮಳವಳ್ಳಿ ಸಾಯಿಕೃಷ್ಣ, ಖಜಾಂಚಿಗಳಾದ ಆದಿತ್ಯ ಚಿಕ್ಕಣ್ಣ, ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಹಾಜರಿದ್ದರು. ಇದೇ ಸಂದರ್ಭದಲ್ಲಿ ಸಂಘದ ಕಛೇರಿಯಲ್ಲಿ ಕರ್ನಾಟಕ ಚಲನಚಿತ್ರ ಕಾರ್ಮಿಕರ, ತಂತ್ರಜ್ಞರ, ಕಲಾವಿದರ ಒಕ್ಕೂಟಕ್ಕೆ ನೂತನವಾಗಿ ಆಯ್ಕೆ ಆಗಿರುವ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಗೌರವಿಸಸಲಾಯಿತು. ಆನಂತರ ಚಿತ್ರರಂಗದ ಬೆಳವಣಿಗೆಯ ಬಗ್ಗೆ ಸಂಘದ ಕಛೇರಿಯಲ್ಲಿ ಮಾತುಕತೆ ನಡೆಸಲಾಯಿತು.



# ಸತ್ಯಕ್ಕಾಗಿ ನಿರಂಜನ್ ಸುಧೀಂದ್ರ ಹೋರಾಟ..

ರಿಯಲ್ ಸ್ಟಾರ್ ಉಪೇಂದ್ರ ಅಣ್ಣನ ಮಗ ನಿರಂಜನ್ ಸುಧೀಂದ್ರ ನಾಯಕನಾಗಿ ನಟಿಸುತ್ತಿರುವ ಸಿನಿಮಾ ಸ್ಪಾರ್ಕ್. ಈ ಚಿತ್ರದ ಟೀಸರ್ ಬಿಡುಗಡೆ ಮಾಡಲಾಗಿದೆ. ನಿರಂಜನ್ ಪತ್ರಕರ್ತನಾಗಿ ಅಭಿನಯಿಸಿದ್ದು, ಈ ಚಿತ್ರದಲ್ಲಿ ಒಂದು ವಿಶಿಷ್ಟ ಪಾತ್ರದಲ್ಲಿ ನೆನಪಿರಲಿ ಪ್ರೇಮ್ ಕಾಣಿಸಿಕೊಂಡಿದ್ದಾರೆ. ಒಂದು ಹಗರಣದ ಸುತ್ತ ಸಾಗುವ ಕಥೆಯನ್ನು ಸಿನಿಮಾದಲ್ಲಿ ಕಟ್ಟಿಕೊಡಲಾಗಿದೆ. ಸತ್ಯಕ್ಕಾಗಿ ನಿರಂಜನ್ ಹೋರಾಟ ಹೇಗಿದೆ ಅನ್ನೋದನ್ನು ಟೀಸರ್‌ನಲ್ಲಿ ತೋರಿಸಲಾಗಿದೆ. ಟೀಸರ್ ಬಿಡುಗಡೆ ಬಳಿಕ ಮಾತನಾಡಿದ ನಟ ನಿರಂಜನ್ ಸುಧೀಂದ್ರ, ಸ್ಪಾರ್ಕ್ ಎಲ್ಲರ ಮನಸ್ಸಿನಲ್ಲಿರುವ ಕಿಡಿ. ಏನೇ ಹಗರಣ, ಏನೇ ನಡೆದರು ಮೊದಲು ಧ್ವನಿ ಎತ್ತುವುದು ಪತ್ರಕರ್ತರು. ಅವರಿಗೆ ಸಿಗುವ ಗೌರವ ಹಾಗೂ ಗುರುತಿಸುವಿಗೆ ಮಿಸ್ ಆಗುತ್ತಿದೆ. ನಾನು ಚಿತ್ರದಲ್ಲಿ ಜರ್ನಲಿಸ್ಟ್ ಪಾತ್ರ ನಿರ್ವಹಿಸುತ್ತಿರುವುದು ಕುಷಿ ತಂದಿದೆ ಎಂದರು.



# 'ಕಾಂತಾರ ಚಾಪ್ಟರ್ 1'ನಲ್ಲಿ ಗುಲ್ಶನ್ ದೇವಯ್ಯ

'ಕಾಂತಾರ ಚಾಪ್ಟರ್ 1'ನಲ್ಲಿ ಜನಪ್ರಿಯ ನಟ ಗುಲ್ಶನ್ ದೇವಯ್ಯ ಅವರು ಪ್ರಮುಖ ಪಾತ್ರವಾದ ಕುಲಶೇಖರನಾಗಿ ಕಾಣಿಸಿಕೊಳ್ಳಲಿದ್ದಾರೆ ಎಂದು ಹೊಂಬಾಳೆ ಫಿಲಮ್ಸ್ ಹೆಮ್ಮೆಯಿಂದ ಘೋಷಿಸಿದೆ. ರಿಷಬ್ ಶೆಟ್ಟಿ ನಿರ್ದೇಶನದ ಈ ಚಿತ್ರ, ಜಾಗತಿಕವಾಗಿ ಮೆಚ್ಚುಗೆಗಳಿಸಿದ 'ಕಾಂತಾರ' (2022) ದ ಹಿಂದಿನ ಅಧ್ಯಾಯವಾಗಿದ್ದು, ಹೊಂಬಾಳೆ ಫಿಲಮ್ಸ್‌ನ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಒಂದಾಗಿದೆ. ಈ ಚಿತ್ರವು ಸಂಸ್ಕೃತಿ, ಜಾನಪದ ಮತ್ತು ಅದ್ಭುತ ಕಥಾಹಂದರದ ಆಳವಾದ ಪದರಗಳನ್ನು ಪರಿಶೋಧಿಸಲಿದೆ. ರಿಷಬ್ ಶೆಟ್ಟಿ ಮತ್ತು ರುಕ್ಮಿಣಿ ವಸಂತ್ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ 'ಕಾಂತಾರ ಚಾಪ್ಟರ್ 1' ಪ್ರಬಲ ನಿರೂಪಣೆ ಮತ್ತು ಅದ್ಭುತ ದೃಶ್ಯಗಳೊಂದಿಗೆ ಪ್ರೇಕ್ಷಕರನ್ನು ಆಕರ್ಷಿಸಲು ಸಿದ್ಧವಾಗಿದೆ. ಈ ಚಿತ್ರವು 2025ರ ಅಕ್ಟೋಬರ್ ತಿಂಗಳಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ, ತೆಲುಗು, ತಮಿಳು, ಮಲಯಾಳಂ ಮತ್ತು ಬಂಗಾಳಿ ಭಾಷೆಗಳಲ್ಲಿ ಬಿಡುಗಡೆಯಾಗಲಿದೆ.









Edited, Published, Printed by Lalita Kumari (Lalithasri Preetham Rai) Shop N0: 6, Lingamma Towers. Opp. Pandeshwar police station, Pandeshwar Mangaluru 575001. Dakshina Kannada.
All Rights Reserved RNI Ref: 1327299/KARKAN26532. Printed @ N R K Media World, No-10, 'A' 1st floor, 4th cross, 4th main, Gandhinagar Bengaluru-560009. email: karavalitharangini@gmail.com PH: +91 9880109212